ಶ್ರೀ ರಾಮಚಂದ್ರ ಮಿಷನ್®

ECHOES ಇಂಡಿಯಾ ವಾರ್ತಾಪತ್ರ

# ಗುರುಗಳ ವಾರ್ತೆ





## ಉತ್ತರ ಅಮೇರಿಕಾದ ಪ್ರವಾಸ

ಗೌರವಾನ್ವಿತ ಕಮಲೇಶ್ ಭಾಯಿಯವರು ಮೇ 26ರ ಮಧ್ಯಾಹ್ನದಂದು ನ್ಯೂಯಾರ್ಕ್‌ನ ಜೆಎಫ್ಕ್‌ಕೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡೆನ್ಮಾರ್ಕ್‌ನಿಂದ ಬಂದಿಳಿದರು. ಉತ್ತರ ಅಮೇರಿಕಾದಲ್ಲಿ ಒಂದು ತಿಂಗಳಿಗೂ ಹೆಚ್ಚಿನ ಅವಧಿಯ ಅವರ ಪ್ರವಾಸವು ಸಹಜಮಾರ್ಗವನ್ನು ಈ ಪ್ರದೇಶದಲ್ಲಿ ಹೊಸ ಎತ್ತರಕ್ಕೆ ಕೊಂಡೊಯ್ದಿತು. ಅವರು ಮೊನ್ರೊ(ನೂಜೆರ್ಸಿ), ಟೊರಾಂಟೊ (ಕೆನಡಾ), ಡೆಟ್ರಾಯಿಟ್(ಮಿಚಿಗನ್), ಬೆವರ್ಕ್ರೀಕ್(ಡೇಟನ್), ಫ್ರೇಮಂಟ್(ಕ್ಯಾಲಿಫೋರ್ನಿಯ), ಆಸ್ಟಿನ್(ಟೆಕ್ಸಾಸ್), ಸ್ಪರ್ಸ್ ರಿಟ್ರೀಟ್, ಮೊಲೆನಾ(ಜಾರ್ಜಿಯಾ), ರಿಚ್‌ಮಂಡ್(ವರ್ಜಿನಿಯಾ) ಮತ್ತು ಸ್ಟೇಟನ್ ಐಲ್ಯಾಂಡ್(ನ್ಯೂಯಾರ್ಕ್)ನಲ್ಲಿನ ಆಶ್ರಮಗಳು ಹಾಗು ಕೇಂದ್ರಗಳನ್ನು ಸಂದರ್ಶಿಸಿದರು. ತಮ್ಮ ಪ್ರವಾಸದುದ್ದಕ್ಕೂ ಕಮಲೇಶ್ ಭಾಯಿಯವರು ಅಭ್ಯಾಸಿಗಳ ಭೇಟಿ, ಸತ್ಸಂಗಗಳು ಮತ್ತು ಹೃತ್ಪೂರ್ವಕತೆಯ ಅವಧಿಗಳನ್ನು ನಡೆಸುತ್ತ, ಹಾಗೆಯೇ ಅಭ್ಯಾಸಿಗಳಿಗೆ ಹೊಸ ವಿಧಾನವಾದ **ಹೃತ್ಪೂರ್ವಕತೆ** ಮತ್ತು ಇತರೆ ಆಧ್ಯಾತ್ಮಿಕ ವಿಚಾರಗಳ ಸಂಬಂಧಿತ ಅನುಮಾನಗಳನ್ನು ಪರಿಹರಿಸುತ್ತ ಕಾರ್ಯನಿರತರಾಗಿದ್ದರು. ಅವರು ಯುವಕರು, ವಯಸ್ಸಾದವರು, ಮಕ್ಕಳು ಮುಂತಾದ ಎಲ್ಲರೊಂದಿಗೂ ಸಮಯ ಕಳೆಯುತ್ತ **ವಿಶ್ರಾಂತಿಯ ವಿಧಾನಗಳು** ಮತ್ತು ಸಹಜಮಾರ್ಗವನ್ನು ಜಗತ್ತಿಗೆ ಲಭ್ಯವಾಗುವಂತೆ ಮಾಡುವ ಬಗ್ಗೆ ವಿವರಿಸುತ್ತಿದ್ದರು. ಅವರು ಆಧ್ಯಾತ್ಮಿಕತೆ ಮತ್ತು ಸಾಧನೆಯ ಪ್ರಮುಖತೆಯ ಬಗೆಗಿನ ತಮ್ಮ ಕೆಲವು ಗಂಭೀರ ಅನಿಸಿಕೆಗಳನ್ನು ಹಂಚಿಕೊಂಡರು.

ಈ ಪ್ರದೇಶದ ಅಭ್ಯಾಸಿಗಳು ಅವರೊಂದಿಗೆ ಕಳೆದ ಪ್ರತೀ ಕ್ಷಣವೂ ಅತ್ಯಂತ ಅಮೂಲ್ಯವಾಗಿದ್ದನ್ನು ಅನುಭವಿಸಿದರು. ಅವರ ಪ್ರಯಾಣದ ಸಂದರ್ಭದಲ್ಲಿನ ಮಾತುಕತೆಗಳು ಮತ್ತು ಅನೌಪಚಾರಿಕ ಸಂಭಾಷಣೆಗಳ ಕೆಲ ಪ್ರಮುಖಾಂಶಗಳನ್ನು ಇಲ್ಲಿ ನೀಡಲಾಗಿದೆ. ಅಭ್ಯಾಸಿಗಳಿಗಾಗಿ ಪ್ರವಾಸದ ಸಂಪೂರ್ಣ ವರದಿಯನ್ನು ಮಿಷನ್ನಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

- ಸೂಕ್ಷ್ಮತೆಯು ಪ್ರಗತಿಯ ಮೂಲಾಂಶವಾಗಿದೆ. ಸೂಕ್ಷ್ಮತೆಯಿಲ್ಲದೆ ಗುರಿ ತಲುಪಲು ಸಾಧ್ಯವಿಲ್ಲವೆಂದು ಅವರು ಹೇಳಿದರು.
- ಜನರನ್ನು ನಂಬುವುದು ಒಳ್ಳೆಯದು. ನಂಬಿಕೆ ದ್ರೋಹದ ಘಟನೆಗಳಿದ್ದರೂ, ದೀರ್ಘ ಕಾಲಾನುಕ್ರಮದಲ್ಲಿ ಜನರನ್ನು ನಂಬುವವರು ಲಾಭ ಹೊಂದುತ್ತಾರೆ.
- ಅಭ್ಯಾಸಿಯೊಬ್ಬರು ದಿವ್ಯಲೋಕ ಎಲ್ಲಿದೆಯೆಂದು ಪ್ರಶ್ನಿಸಲು ಕಮಲೇಶ್‌ಭಾಯಿಯವರು ತಮ್ಮ ಹೃದಯದೆಡೆ ಬೆರಳು ಮಾಡಿ "ಅದು ಇಲ್ಲೇ ಇದೆ, ನಮ್ಮ ಹೃದಯದಲ್ಲಿ. ನಾವು ಈಗ ದಿವ್ಯ ಲೋಕದಲ್ಲಿ ಇಲ್ಲದೆ ಹೋದರೆ, ನಮ್ಮ ದೇಹವಸಾನದ ನಂತರ ಅಲ್ಲಿಗೆ ತಲುಪುವುದು ಸಾಧ್ಯವಿಲ್ಲ" ಎಂದರು.
- ಹೃತ್ಪೂರ್ವಕತೆಯನ್ನು ವಿವರಿಸುತ್ತ ಅವರು 'ಇದೇನು ಹೊಸ ವಿಚಾರವಲ್ಲ.





ಬಹುಶ: ದೇವರ ಅತ್ಯುನ್ನತ ಹೃತ್ಪೂರ್ವಕತೆಯೇ ಈ ವಿಶ್ವವನ್ನು ನಿರ್ಮಿಸಿರಬೇಕು' ಎಂದರು. ಸಹಜಮಾರ್ಗ ಮತ್ತು ಹೃತ್ಪೂರ್ವಕತೆ ಎರಡೂ ಸಮಾನವೇ ಆಗಿದ್ದು ಇದು ಸರಳತೆ ಮತ್ತು ಶುದ್ಧತೆಯ ವಿಚಾರವೇ ಆಗಿದೆ.



- ನಾವು ನಮ್ಮ ಜೀವನದಲ್ಲಿ ಹೃತ್ಪೂರ್ವಕತೆಯನ್ನು ಇತರರೆಡೆಗೆ ಗೌರವವನ್ನಿರಿಸಿಕೊಂಡೇ ಅಭ್ಯಾಸ ಮಾಡಬೇಕು ಎಂಬುದನ್ನು ಒತ್ತಿ ಹೇಳಿದರು. ನಾವು ಸದಾ ನಮ್ಮ ತಪ್ಪುಗಳನ್ನು ನಿರ್ಲಕ್ಷಿಸುತ್ತಲೇ ಇತರರನ್ನೂ ಕ್ಷಮಿಸಲಾಗದವರಾಗಿದ್ದೇವೆ. ಪ್ರತಿಯೊಬ್ಬರೂ ತಮ್ಮ ಹೃದಯನ್ನು ಕೇಳಬೇಕು ಮತ್ತು ತಮ್ಮೊಳಗೆ ಸಂಪೂರ್ಣ ಸ್ಪಷ್ಟತೆಯನ್ನು ಹೊಂದಬೇಕು, ಮತ್ತು ಎಂತಹ ವ್ಯತಿರಿಕ್ತ ಪರಿಸ್ಥಿತಿಗಳಲ್ಲೂ ಹೃದಯನ್ನು ಅನುಸರಿಸುವ ಛಲವನ್ನು ಹೊಂದಿರಬೇಕು ಎಂದರು.

- ಪ್ರೇಮ, ಪ್ರೇಮಿ ಮತ್ತು ಪ್ರಿಯತಮ ಈ ತ್ರಿತಯದಲ್ಲಿ ಒಂದು ಸೌಂದರ್ಯವಿದೆ. ನನ್ನ ಪ್ರಿಯತಮನಲ್ಲಿ ಪರಿಪೂರ್ಣವಾಗಿ ನಾನು ಕರಗಿ ಹೋಗುವ ತನಕ, ನನ್ನಲ್ಲಿ ಏನೂ ಉಳಿಯದಂತಾಗುವ ತನಕ, ಯಾವುದೇ ಅಧ್ಯಾತ್ಮ ಸಾಧ್ಯವಿಲ್ಲ. ಲಯವಾಗುವುದು ಕೊನೆಯಲ್ಲ, ಅದು ಶುದ್ಧ ಅಧ್ಯಾತ್ಮ ಜೀವನದ ಆರಂಭ.

## ಬೆಂಗಳೂರು

26 ರ ಭಾನುವಾರದ ಮಧ್ಯಾಹ್ನದ ನಂತರ ಕಮಲೇಶ ಭಾಯಿಯವರು ಚೆನ್ನೈಯಿಂದ ಬೆಂಗಳೂರಿಗೆ ತಮ್ಮ ಪ್ರಯಾಣವನ್ನು ಆರಭಿಸಿದರು. ಸುಮಾರು 6.30 ರ ಹೊತ್ತಿಗೆ ಹೊಸೂರು ತಲುಪಿ ಅಲ್ಲಿನ ಧ್ಯಾನ ಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಇಳಿ ಸಂಜೆಯ ವೇಳೆಗೆ ಬೆಂಗಳೂರನ್ನು ತಲುಪಿದರು. 27 ಮತ್ತು 28 ರಂದು ಕಮಲೇಶ ಭಾಯಿಯವರು ಬೈಠಕ್‌ಗಳನ್ನು ನೀಡುತ್ತ, ಹಿರಿಯ ಅಭ್ಯಾಸಿಗಳನ್ನು ಮತ್ತು ಮಕ್ಕಳನ್ನು ಭೇಟಿ ಮಾಡುತ್ತ, ಪ್ರಶಿಕ್ಷಕರನ್ನು ಸಿದ್ಧಗೊಳಿಸುತ್ತ ಕಾರ್ಯನಿರತರಾಗಿದ್ದರು. ಹೃತ್ಪೂರ್ವಕತೆಯ ಬಗೆಗೆ ಅನೇಕ ಅನೌಪಚಾರಿಕ ಮಾತುಕತೆಗಳಿದ್ದವು. 29ರಂದು ಕಮಲೇಶ್ ಭಾಯಿಯವರು ಮುಂಜಾನೆಯೇ ಬೇಗನೆದ್ದು ಸಿದ್ಧರಾಗಿ ಅಭ್ಯಾಸಿಗಳ ಗುಂಪುಗಳನ್ನು ಭೇಟಿ ಮಾಡಿದರು. ಉಪಾಹಾರದ ಸಮಯದಲ್ಲಿ ಸಹಜಮಾರ್ಗವು ಒಂದು ಆಧ್ಯಾತ್ಮಿಕ ಚಳವಳಿಯಾಗಿ ಹೊರಹೊಮ್ಮಬೇಕಾಗಿದ್ದು ಇಲ್ಲಿ ಎಲ್ಲರೂ ಪರಸ್ಪರ ಏಕತೆ ಮತ್ತು ಬದ್ಧತೆಯ ಭಾವನೆಯಿಂದ ಸಕ್ರಿಯವಾಗಿ ಇದರಲ್ಲಿಪಾಲ್ಗೊಳ್ಳಬೇಕು ಎಂದರು. ಸುಮರ್ರು 7.30ಕ್ಕೆ ಅವರು ಜೋನಲ್ ಆಶ್ರಮಕ್ಕೆ ತೆರಳಿದರು. ಜೋನಲ್ ಆಶ್ರಮದಲ್ಲಿ ಸಾವಿರಾರು ಅಭ್ಯಾಸಿಗಳು ನೆರೆದಿದ್ದು ಶಾಂತರೀತಿಯಿಂದ ಅವರ ಆಗಮನವನ್ನು ನಿರೀಕ್ಷಿಸುತ್ತಿದ್ದರು. 9 ಗಂಟೆಗೆ ಬೆಳಗಿನ ಸತ್ಸಂಗವನ್ನು ನೆರವೇರಿಸಿ ಅವರು ಕಿರು ಭಾಷಣವನ್ನು ಮಾಡಿ ಗುರುಗಳಿಂದ ಕೊಡುಗೆಯಾಗಿ ನೀಡಲ್ಪಟ್ಟಿರುವ ಸ್ಥಿತಿಯನ್ನು ಬಳಸಿಕೊಳ್ಳಬೇಕಾದ ಬಗೆಯನ್ನು ಕುರಿತು ಹೇಳುತ್ತಾ "ಜನರನ್ನು ನೋಡುವಾಗ, ಸೇವೆ ಮಾಡುವಾಗ, ಕೇಳುವಾಗ ಅವರ ಹೃದಯವನ್ನು ತಲುಪಿ ಹರಿಯಲಿ. ಅದು ಇತರರನ್ನು ಸ್ಪರ್ಶಿಸಲಿ, ಅವರ ಹೃದಯನ್ನು ಮುಟ್ಟಲಿ. ಹೀಗೆ ನಮ್ಮೊಳಗೆ ತುಂಬಿರುವುದು ಈ ಚಲನಾತ್ಮಕ ಕ್ರಿಯೆಯಿಂದಾಗಿ ಮತ್ತಷ್ಟು ವೃದ್ಧಿಸುತ್ತದೆ" ಎಂದರು. ಸಂಜೆ 5ಕ್ಕೆ ಕಮಲೇಶ್ ಭಾಯಿಯವರು ಮತ್ತೊಂದು ಸತ್ಸಂಗವನ್ನು ನೆರವೇರಿಸಿದರು. ನಂತರ ಮಾತನಾಡಿ ಎಲ್ಲರೂ ಈ ಮಹಾನ್ ಆಧ್ಯಾತ್ಮಿಕ ಚಳವಳಿಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಿದರು.

## ಆಂಧ್ರ ಪ್ರದೇಶ ಪ್ರವಾಸ

ಜುಲೈ 30ರಿಂದ ಕಮಲೇಶ್ ಭಾಯಿವವರು ತಮ್ಮ ಆಂಧ್ರಪ್ರದೇಶದ ಪ್ರವಾಸವನ್ನು ಪ್ರಾರಂಭಿಸಿದರು. ಅವರನ್ನು ಬೆಂಗಳೂರಿಂದ ಬೆಳಗಿನ 7.30ಕ್ಕೆ ಅನಂತಪುರಕ್ಕೆ ಹೊರಟರು. ಅನಂತಪುರ ಹೆಸರನ್ನು ಪ್ರಸ್ತಾಪಿಸುತ್ತ ಅವರು "ಅನಂತೆದೆಡೆಗಿನ ಪ್ರಯಾಣ ಆರಂಭವಾಯಿತು – ಅನಂತ್ ಕೀ ಯಾತ್ರ" ಎಂದರು. ಅವರ ಮಾತುಗಳಲ್ಲಿ ಗುರು ಪೂರ್ಣಿಮೆಯ ಮಹತ್ವವನ್ನು ಪ್ರಸ್ತಾಪಿಸುತ್ತ ಗುರುವಿನ ಸ್ಮರಣೆಯಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ಕಳೆದುಕೊಳ್ಳಬೇಕಾದ ದಿನ ಎಂದರು. ಹೃತ್ಪೂರ್ವಕತೆಯು ಸಹಜಮಾರ್ಗಕ್ಕೆ ಒಂದು ಹಾದಿಯಾಗಿದ್ದು, ಸಹಜಮಾರ್ಗವು ಕ್ರಮಿಸಬೇಕಾದ ರಸ್ತೆಯಾಗಿದೆ ಮತ್ತು ರಾಮಚಂದ್ರ ಮಿಷನ್ ಒಂದು ಸಂಸ್ಥೆ ಎಂದು ಹೇಳಿದರು.

ಅವರು ಹಿರಿಯರನ್ನು ಪ್ರೀತಿಸುವ ಮತ್ತು ಸಹಾಯಮಾಡುವ ವಿಷಯಗಳ ಪ್ರಮುಖತೆಯನ್ನು ಕುರಿತು ಪ್ರಸ್ತಾಪಿಸುತ್ತ ಯುವಜನತೆ ಹಿರಿಯರೊಡನೆ ಹೆಚ್ಚು ಸಮಯವನ್ನು ಕಳೆಯುತ್ತ ಅವರ ಅನುಭವಗಳಿಂದ ಕಲಿಯಬೇಕೆಂದು ಸಲಹೆ ನೀಡಿದರು. ಸಹಜಮಾರ್ಗವು ಸೇವೆಗಾಗಿ ಹೆಸರಾಗಬೇಕು, ಅನಂತ ಸೇವಾ ಎಂದು ಆಶಿಸಿದರು.

ಜುಲೈ 31ರ ಶುಕ್ರವಾರ ಗುರುಪೂರ್ಣಿಮೆಯ ದಿನವಾಗಿತ್ತು. ಸತ್ಸಂಗದ ನಂತರ ಅವರು ಆಧ್ಯಾತ್ಮಿಕ ಯಾತ್ರೆಯ ಕುರಿತು ಮಾತನಾಡಿ 'ಹಗುರಾಗಿ ಪಯಣಿಸುವ ಕುರಿತು ಪ್ರಸ್ತಾಪಿಸಿದರು. ಲಯಾವಸ್ಥೆ ಹೊಂದಲು ನಾವು ಹೆಚ್ಚು ಧ್ಯಾನಿಸಬೇಕು









ಎಂದು ಸಲಹೆ ನೀಡಿದರು. **ನಂದ್ಯಾಲ**ದ ಹಾದಿಯಲ್ಲಿ **ತಾಡಪತ್ರಿ** ಆಶ್ರಮಕ್ಕೆ ಭೇಟಿ ನೀಡಿದ ಕಮಲೇಶ್ ಭಾಯಿಯವರು ಅಲ್ಲಿನ ಸ್ಥಳೀಯ ಭಾಷೆಯಲ್ಲಿ ನಡೆದ ಹೃತ್ಪೂರ್ವಕತೆಯ ಕಾರ್ಯಕ್ರಮದ ನಂತರ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ನಂದ್ಯಾಲನ್ನು ಮಧ್ಯಾಹ್ನ 2 ಗಂಟೆಗೆ ತಲುಪಿದರು. ಅದಾಗ ತಾನೆ ಊಟದ ಸಮಯವಾಗಿದ್ದರೂ ಹಸಿವು ಮತ್ತು ಹೆಚ್ಚು ಆಯಾಸವಿಲ್ಲದಿದ್ದಲ್ಲಿ ಎಲ್ಲರು ಸತ್ಸಂಗದಲ್ಲಿ ಭಾಗವಹಿಸಿ ಎಂದು ಗುರುಗಳು ಕೇಳಿದರು. ಹಾಗೆಯೇ ತಮಾಷೆಯಿಂದ ಇದೊಂದು ಕಿರು ಸತ್ಸಂಗ ಎಂದೂ ಆಶ್ವಾಸನೆ ಕೊಟ್ಟರು. ಊಟದ ಸಮಯದಲ್ಲಿ ಅಭ್ಯಾಸಿಯೊಬ್ಬರು ಕಮಲೇಶ್ ಭಾಯಿಯವರನ್ನು ಮಳೆ ಬರಿಸುವಂತೆ ಪ್ರಾರ್ಥಿಸಿದರು. ಕಮಲೇಶ್ ಭಾಯಿಯವರು 'ನಮ್ಮ ಗುರುಗಳಿಗೆ ಮಳೆಗಾಗಿ ನಾನು ಪ್ರಾರ್ಥಿಸಿದ್ದೇನೆ' ಎಂದರು. ಸ್ಥಳೀಯ ಅಭ್ಯಾಸಿಗಳಿಗೆ ಆಶ್ಚರ್ಯವೆಂಬಂತೆ ಸಂಜೆ ಧಾರಾಕಾರ ಮಳೆ ಸುರಿಯಿತು.

ಅವರು ಮುಂದಿನ ನಿಲ್ದಾಣ **ನಂದಿಕೊಟ್ಕೂರ್** ಆಶ್ರಮವಾಗಿತ್ತು. ಅಲ್ಲಿ ಮಧ್ಯಾಹ್ನ ಸತ್ಸಂಗ ನಡೆಸಿ ನಂತರ ಅವರು ಕರ್ನೂಲಿಗೆ ಹೊರಟರು. ಕಾರ್‌ನಲ್ಲಿ ಪ್ರಯಾಣಿಸುತ್ತ ಯಾವಾಗ ಮಧ್ಯಾಹ್ನದ ವೇಳೆ ಸತ್ಸಂಗ ನಡೆಯುತ್ತದೋ ಆಗ ಅದು ಅತ್ಯಂತ ಆಳ ಮತ್ತು ತೀವ್ರವಾಗಿರುತ್ತದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. **ಕರ್ನೂಲಿ**ನಲ್ಲಿ ಗುರುಗಳು ಸಹಜಮಾರ್ಗ ಚಳವಳಿ ಮತ್ತು ಹಿರಿಯರ ಅನಂತ ಸೇವಾ ಕುರಿತು ಮಾತನಾಡಿದರು. ಹಾಗೆಯೇ ಕರ್ನೂಲ್ ಕೇಂದ್ರವು ಸತ್ಸಂಗಗಳನ್ನು ವಿಕೇಂದ್ರೀಕರಣಗೊಳಿಸಿ ಅಭ್ಯಾಸಿಗಳಿಗೆ ಕಾಲ್ನಡಿಗೆಯ ದೂರದಲ್ಲಿ ಧ್ಯಾನಕೇಂದ್ರಗಳು ಲಭ್ಯವಾಗುವ ಹಾಗೆ ಇನ್ನಷ್ಟು ಸ್ಥಳಗಳನ್ನು ಏರ್ಪಡಿಸಿದರೆ ಇನ್ನಷ್ಟು ಜನರು ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.



ಆಗಸ್ಟ್ 2ರ ಭಾನುವಾರ ಸತ್ಸಂಗದ ನಂತರ ಕಮಲೇಶ್ ಭಾಯಿಯವರು ತಮ್ಮ ಭಾಷಣದಲ್ಲಿ ಇತರರೆಡೆಗೆ ಸಹಾನುಭೂತಿ ಮತ್ತು ಅಗತ್ಯವಿದ್ದಲ್ಲಿ ಸಹಾಯ ಮಾಡುವದರ ಕುರಿತು ಪ್ರೇರೇಪಿಸಿದರು. ನಾವು ಬೇರೊಬ್ಬರ ದು:ಖವನ್ನು ನೋಡಿದಾಗ ಕಡೆಯಪಕ್ಷ ಪ್ರಾರ್ಥನೆಯನ್ನಾದರು ಮಾಡಬೇಕು ಎಂದರು. ಯಾವುದೇ ಸನ್ನಿವೇಶವಿದ್ದರೂ ನಾವು ನಮ್ರತೆ, ಸರಳತೆ ಮತ್ತು ಪ್ರೀತಿಸುವ ಹೃದಯವನ್ನು ಬೆಳಸಿಕೊಳ್ಳಬೇಕು. ಇದು ಮಾತ್ರ ನಮ್ಮನ್ನು ಜೊತೆಯಾಗಿ ಮುಂದಕ್ಕೆ ಕರೆದೊಯ್ಯಬಲ್ಲುದಾಗಿದೆ ಎಂದರು.

ಗುರುಗಳು ಬೆಳಗಿನ ಸುಮಾರು 10 ಗಂಟೆಗೆ **ಯಮ್ಮಿಗನೂರಿಗೆ** ಹೊರಟರು. ಸಂಜೆಯ 6ರ ಸತ್ಸಂಗದ ನಂತರ ನಾವು ಮೇಲಿನಿಂದ ಮಾರ್ಗದರ್ಶನ ಪಡೆಯಲು ಧ್ಯಾನಿಸಬೇಕು ಎಂದರು. ಯಾರೋ ಒಬ್ಬರು ನಾವೇಕೆ ಇತರ ಸಂಸ್ಥೆಗಳ ರೀತಿಯಲ್ಲಿ ಸಮಾಜ ಸೇವೆಯ ಕೆಲಸಗಳನ್ನು ಮಾಡುತ್ತಿಲ್ಲ ಎಂದು ಕೇಳಲು ಅವರು "ನಾನು ಇದನ್ನು ಒಪ್ಪುತ್ತೇನೆ, ನಿಮ್ಮಲ್ಲಿ ಹಣ ಮತ್ತು ಸಮಯ ಇದ್ದರೆ ಖಂಡಿತವಾಗಿ ಮಾಡಿ" ಎಂದರು.

ಗುರುಗಳು ಮಾತನಾಡುತ್ತ ಸಹಜಮಾರ್ಗವು ಧರ್ಮವಿರೋಧಿ ಎಂಬ ತಪ್ಪು ಕಲ್ಪನೆ ಬಹಳ ಜನಕ್ಕಿದೆ. ವಾಸ್ತವದಲ್ಲಿ ಸಹಜಮಾರ್ಗವು ಧರ್ಮದ ಸಾರವನ್ನು ತೆಗೆದುಕೊಳ್ಳುತ್ತದೆ ಎಂದರು. ಹಾಗೆಯೇ ಅವರು ಧರ್ಮದ ಸಾರವೆಂದರೇನು? ಎಂಬ ಪ್ರಶ್ನೆಗೆ ಉತ್ತರಿಸುತ್ತಾ 'ಮೊದಲಿಗೆ ದೇವರು ಎಲ್ಲೆಡೆ ಇದ್ದಾನೆ, ಎರಡನೆಯದಾಗಿ ಪ್ರೇಮವೇ ಧರ್ಮದ ಮೂಲವಾಗಿದೆ. ನಾವೂ ಅದನ್ನೇ ಮಾಡುತ್ತಿದ್ದೇವೆ ಎಂದರು. ಭಗವದ್ಗೀತೆಯ 12 ನೇ ಅಧ್ಯಾಯದ ಉದಾಹರಣೆ ನೀಡುತ್ತ ಅದರಲ್ಲಿ ಹೇಗೆ ಭಗವಾನ್ ಕೃಷ್ಣನು ದೈವೀಭಾವದಲ್ಲಿ ನಮ್ಮ ಕರ್ತವ್ಯಗಳನ್ನು ಮಾಡಬೇಕೆಂದು ಹೇಳುತ್ತಾನೊ, ಅದುವೇ ಸಹಜಮಾರ್ಗದಲ್ಲಿ ನಿರಂತರ ಸ್ಮರಣೆ ಎಂದರು. ಶ್ಲೋಕಗಳನ್ನು ನೆನಪಿಟ್ಟುಕೊಳ್ಳುವ ಬದಲು ಅದರ ಸಾರವನ್ನು ನಮ್ಮ ಜೀವನದಲ್ಲಿ ಅನ್ವಯಿಸುವುದರ ಕಡೆಗೆ ನಮ್ಮ ಗಮನವಿದೆ ಎಂದರು.

ಆಗಸ್ಟ್ 2ರಂದು, **ಕರ್ನೂಲು** ಆಶ್ರಮದಲ್ಲಿ ಸತ್ಸಂಗ ನಡೆಸಿಕೊಟ್ಟ ಅನಂತರ, ತಿರುವಲ್ಲೂರಿನಲ್ಲಿ ನಡೆದ ಭಂಡಾರವು ವರಪ್ರದವಾಗಿದ್ದರೂ, ಹವಾಮಾನವು ಪ್ರತಿಕೂಲವಾಗಿದ್ದಿತೆಂದು ಗುರುಗಳು ಹೇಳಿದರು. ಹಾಗಿದ್ದರೂ, ಅಂತಹ ಪ್ರತಿಕೂಲ ಸನ್ನಿವೇಶಗಳಲ್ಲಿಯೆ ನಮ್ಮ ನಿಜವಾದ ಗುಣ ಹೊರಬೀಳುವುದು. ಅವರು, ಗುಡಾರದಲ್ಲಿ ಒಣ ಪ್ರದೇಶವನ್ನು ತಾಯಿ-ಮಗುವಿಗೆ ಬಿಟ್ಟುಕೊಟ್ಟ ವೃದ್ಧರೊಬ್ಬರ ಉದಾಹರಣೆಯನ್ನು ನೀಡುತ್ತ, ಸೇವೆಯೆಂದರೆ ನಮಗಿಂತ ಮೊದಲು ಇತರರ ಒಳಿತನ್ನು ನೋಡಿಕೊಳ್ಳುವುದು ಎಂದರು.

ಆಗಸ್ಟ್ 3ರಂದು, ಕಮಲೇಶ್ ಭಾಯಿಯವರು ಯಮ್ಮಿಗನೂರಿನಿಂದ 30 ಕಿ. ಮೀ. ದೂರದ **ಆದೋನಿಗೆ** ತೆರಳಿದರು. ಅವರು ಅಲ್ಲಿ 6.30ಕ್ಕೆ ಸತ್ಸಂಗವನ್ನು





ನಡೆಸಿಕೊಟ್ಟರು. ಅವರ ಭೇಟಿಗಾಗಿ ಯಾರೊಬ್ಬರೂ ಆಂತರಿಕ ಸಿದ್ಧತೆ ಮಾಡಿಕೊಳ್ಳದಿರುವುದು ಹಾಗು ಅವರು ಅಭ್ಯಾಸಿಗಳಿಗೆ ನೀಡಬಯಸಿದುದನ್ನು ಸ್ವೀಕರಿಸಲು ಅಸಮರ್ಥರಾದುದನ್ನು ಅವರ ಸ್ಥಿತಿಯು ಪ್ರತಿಪಾದಿಸುತ್ತಿದ್ದಿತೆಂದು ಅವರ ಅಭಿಪ್ರಾಯವಾಗಿದ್ದಿತು. ಉಪಾಹಾರದ ನಂತರ ಅವರು ಯಮ್ಮಿಗನೂರಿಗೆ ಮರಳಿ, ಸಂಜೆ 4 ಗಂಟೆಯ ಸುಮಾರಿಗೆ ಅವರ ಮುಂದಿನ ಗಮ್ಯವಾದ ಉತ್ತರ ಕರ್ನಾಟಕದತ್ತ ಪಯಣಿಸಿದರು.

## ಉತ್ತರ ಕರ್ನಾಟಕ

**ರಾಯಚೂರು** ತಲುಪಿದೊಡನೆಯೆ ಕಮಲೇಶ್ ಭಾಯಿಯವರು ಲಘು ಬೈಠಕನ್ನು ನೀಡಿದರು. ಅವರು, ಸಹಜಮಾರ್ಗದಲ್ಲಿ ನಾವೇನು ಮಾಡುತ್ತಿರುವೆವು ಎಂಬುದನ್ನು ಸಾರಿಹೇಳಬೇಕು ಎಂದರು. ನಾವು ಯುವಜನರೊಡನೆ, ಅದರಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸದುಪಯೋಗ ಮಾಡಿಕೊಳ್ಳುವ ಅಗತ್ಯವಿರುವ ಇಂದಿನ ವಿದ್ಯಾರ್ಥಿಗಳೊಡನೆ ಮಾತನಾಡಲು ಎಂದಿಗೂ ಹಿಂಜರಿಯಲೂಡದು ಎಂದರು. ಅವರು, “ಸಾಧನೆಯಲ್ಲಿ ಯಾವುದೆ ಒಳದಾರಿಯಿಲ್ಲ. ಪ್ರಗತಿಗೆ ಯಾವ ಶ್ರೇಣಿ ವ್ಯವಸ್ಥೆಯೂ ಇಲ್ಲ, ಕೆಲವು ಅಭ್ಯಾಸಿಗಳ ಆಲೋಚನೆಯಂತೆ ಮೊದಲು ಪ್ರಶಿಕ್ಷಕರಾಗುವುದು, ನಂತರ ಉಸ್ತುವಾರಿ ವಹಿಸಿಕೊಳ್ಳುವುದು ಇತ್ಯಾದಿಗಳು ಪ್ರಗತಿಯ ಹಾದಿಯೆಂದು ತಿಳಿದಿರುವರು. ನ್ಯಾಯವಾಗಿ ಹೇಳುವುದಾದರೆ, ನಮ್ಮ ಪದ್ಧತಿಯಲ್ಲಿ ಅನೇಕ ಅಭ್ಯಾಸಿಗಳು ಪ್ರಶಿಕ್ಷಕರಿಗಿಂತ ಮುಂದುವರೆದಿರುವರು. ಬಾಬೂಜಿಯವರು ಪ್ರಶಿಕ್ಷಕರಾಗದಿದ್ದರೂ ಅಧ್ಯಾತ್ಮದ ಅತ್ಯುನ್ನತ್ತ ಸ್ಥಿತಿಯನ್ನು ಸಾಧಿಸಿದರು.

‘ಎಲ್ಲ ಅಭ್ಯಾಸಿಗಳೂ ಎಲ್ಲರ ಒಳಿತಿಗಾಗಿ ಕೆಲಸಮಾಡಲೆಂಬುದು ನನ್ನ ಬಯಕೆ. ನಿಮ್ಮ ಬಳಿ ಇರುವ ಎಲ್ಲರಿಗೂ ವಿಶ್ರಾಂತವಿಧಾನವನ್ನು ಹೇಳಿಕೊಡಿರಿ. ಮುಂದೆ, ಅವರು ಸಹಜಮಾರ್ಗವನ್ನು ಪ್ರಾರಂಭಿಸಲೆಂದು ಬಯಸಿದರೆ, ನಿಮ ಸ್ಥಳೀಯ ಪ್ರಶಿಕ್ಷಕರನ್ನು ಸಂಪರ್ಕಿಸಿ, ಹೊಸತಾಗಿ ಬಂದವರು ಅವಶ್ಯಕವಾದ ವೈಯಕ್ತಿಕ ಅಥವಾ ಸಾಮೂಹಿಕ ಬೈಠಕುಗಳನ್ನು ತೆಗೆದುಕೊಳ್ಳುವುದನ್ನು ಖಚಿತಗೊಳಿಸಿಕೊಳ್ಳಿರಿ. ಸಮಯ ಅತಿ ಕಡಮೆಯಿದೆಯೆಂದು ಬಾಬೂಜಿ ಮಹಾರಾಜರು ಸಂದೇಶಗಳನ್ನು ನೀಡುತ್ತಲೆ ಇರುವರು. ನನಗೆ ತಿಳಿದ ಪ್ರಕಾರ, ಅಲೆಯು ಮರೆಯಾಗುವ ಮುನ್ನ ಪದ್ಧತಿಯನ್ನು ಪ್ರಸರಿಸಲು ಸಮಯ ಕಡಿಮೆಯಿದೆ. ಅಭ್ಯಾಸಿಗಳು ಪದ್ಧತಿಯನ್ನು ಹರಡದೆ ಯಾವ ವಲಯಾಧಿಕಾರಿಗಳು ಅಥವಾ ಪ್ರಶಿಕ್ಷಕರೂ ಸಹ ಏನನ್ನೂ ಮಾಡಲಾರರು. ಜನಸಾಮಾನ್ಯರಲ್ಲಿ ಪದ್ಧತಿಯನ್ನು ಹರಡಿ, ಗುರುಗಳ ಕಾರ್ಯದಲ್ಲಿ ಭಾಗವಹಿಸುವುದು ನಮ್ಮೆಲ್ಲರ ಗುರುದಕ್ಷಿಣೆಯಾಗಬೇಕು.’ ರಾತ್ರಿ ಭೋಜನಕ್ಕೆ ಮುನ್ನ, ಗುರುಗಳು ಹಾರ್ಟ್‌ಫುಲ್‌ನೆಸ್‌ನ ಹೊಸ ವಿಡಿಯೊಗಳನ್ನು ಅವಲೋಕಿಸಿದರು.

ಆಗಸ್ಟ್ 4ರಂದು ಬೆಳಿಗ್ಗೆ ಸೋ. ಕಮಲೇಶರವರು ಬೆಳಿಗ್ಗೆ 8.15ಕ್ಕೆ **ರಾಯಚೂರನ್ನು** ಬಿಟ್ಟು ಗುಲ್ಬರ್ಗಕ್ಕೆ ಹೊರಟರು. ಮಾರ್ಗ ಮಧ್ಯದಲ್ಲಿ ಅವರು **ಶೋರಾಪುರ**ದಲ್ಲಿ ಇಳಿದು ಸತ್ಸಂಗವನ್ನು ನಡೆಸಿಕೊಟ್ಟರು. **ಗುಲ್ಬರ್ಗಾ**ದಲ್ಲಿ ಅವರು ಪುಟ್ಟ ಪುಟ್ಟ ಮಕ್ಕಳನ್ನು ಹಾಗು ಹಳೆಯ ಮತ್ತು ಹೊಸ ಅಭ್ಯಾಸಿಗಳನ್ನು ನೋಡಿ ಸಂತೋಷಗೊಂಡರು. ಸತ್ಸಂಗದ ನಂತರ ಅವರು ಸಹಜ ಮಾರ್ಗದ ಬಗ್ಗೆ ನಮ್ಮ ಹಾದಿ ಹೇಗಿರಬೇಕೆಂದು ನಾವು ಪರ್ಯಾಲೋಚಿಸುವುದರ ಅವಶ್ಯಕತೆಯ ಬಗ್ಗೆ ಪ್ರಮುಖವಾಗಿ ಪ್ರಸ್ತಾಪಿಸುತ್ತ ನಮ್ಮ ಸೂಕ್ಷ್ಮತೆಯನ್ನು ಹೆಚ್ಚಿಸಿಕೊಳ್ಳಲು ನಿಯತವಾಗಿ ಅಭ್ಯಾಸಮಾಡಬೇಕೆಂದು ಹಾಗು ಧ್ಯಾನ ಮತ್ತು ಶುದ್ಧೀಕರಣದ ಅವಶ್ಯಕತೆಯೇ ಬೀಳದ ಹಾಗೆ ನಾವು ವಿಕಸನ ಹೊಂದಬೇಕೆಂದು ತಿಳಿಸಿದರು. ಗುರುಗಳು ‘ ನಾನು ಸೂಕ್ಷ್ಮತಮ ರೂಪದಲ್ಲಿ ನಿಮ್ಮಲ್ಲಿ ಪ್ರತಿದಿನವೂ ಬರುವೆ ಎಂದು ಹೇಳಿರುವುದನ್ನು ಅವರು ತಿಳಿಸುತ್ತಾ ಇದನ್ನು ಅರಿಯುವ ಸೂಕ್ಷ್ಮತೆಯನ್ನು ನಾವು ಹೊಂದಿಲ್ಲ ಎಂಬುದಾಗಿ ಹೇಳಿದರು.







ಆಗಸ್ಟ್ 5ರಂದು ಸೋ. ಕಮಲೇಶ್‌ರವರು **ಸೇಡಂಗೆ** ಹೊರಟರು. ವಲಯಾಧಿಕಾರಿಯು 15 ನಿಮಿಷಗಳ ವಿಶ್ರಾಂತಿಗೊಳಿಸುವ ಕ್ರಿಯೆಯನ್ನು ಕನ್ನಡದಲ್ಲಿ ನಡೆಸಿಕೊಟ್ಟ ನಂತರ ಅವರು ಧ್ಯಾನ ಮಂದಿರದ ಉದ್ಘಾಟನೆಯನ್ನು ಮಾಡಿದರು. 9.00 ಗಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟು ಕೆಲವು ರೇಖಾ ಚಿತ್ರಗಳ ವಿಮರ್ಶೆ ಮಾಡುತ್ತಾ ಸಲಹೆಗಳನ್ನು ನೀಡಿ ನಂತರ ರಸ್ತೆಯ ಮಾರ್ಗದ ಮೂಲಕ **ಹೈದರಾಬಾದಿಗೆ** ಹೊರಟರು.

## ಹೈದರಾಬಾದ್

ಅಪರಾಹ್ನದ ಹೊತ್ತಿಗೆ ಅವರು **ಕಾನ್ಹಾ** ಆಶ್ರಮವನ್ನು ತಲುಪಿದರು. ಅವರು ಹೋದಡೆಯಲ್ಲೆಲ್ಲ ಮಳೆಯು ಆಹ್ವಾನ ನೀಡುತ್ತಿದ್ದಿತು. ಅವರು ಆಗಮಿಸುತ್ತಿದ್ದಂತೆ ಕಾನ್ಹಾ ಆಶ್ರಮದಲ್ಲಿಯೂ ಸಹ ಅಂತೆಯೇ ಮಳೆಗರೆಯಿತು. ಸತ್ಸಂಗದ ನಂತರ ಅವರು ಆಶ್ರಮದ ವಲಯವನ್ನು ಪರಿಶೀಲಿಸಿದರು.

ಆಗಸ್ಟ್ 6 ರಂದು ಬೆಳಿಗ್ಗೆ 6 ಗಂಟೆಗೆ ಗುರುಗಳು **ತುಮಕುಂಟ ಆಶ್ರಮಕ್ಕೆ** ಹೊರಟರು. ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮಕ್ಕೆ ಅವರು ಅಧ್ಯಕ್ಷತೆಯನ್ನು ವಹಿಸಿದರು. 7ನೇ ತಾರೀಖು ಅವರು 200 ಅಭ್ಯಾಸಿಗಳಿರುವ **ಭೊಂಗೀರ್** ಎಂಬ ಪ್ರವರ್ಧಮಾನಕ್ಕೆ ಬಂದಿರುವ ಸಣ್ಣ ಕೇಂದ್ರಕ್ಕೆ ಭೇಟಿ ನೀಡಿದರು. ಅವರು ಸತ್ಸಂಗವನ್ನು ನಡೆಸಿಕೊಟ್ಟ ನಂತರ ಅವರಿಗೆ ಮಾತನಾಡಲು ಕೇಳಿಕೊಂಡ ಸಮಯದಲ್ಲಿ ಅವರು ಮಾತನಾಡ ಬಯಸಿರುವ ಒಬ್ಬ ಸೋದರಿಯತ್ತ ಗಮನಹರಿಸಿದರು. ಆಕೆಯ ನಂತರ ಹಲವರು ತಮ್ಮ ಕೃತಜ್ಞತೆಯನ್ನು ಹಾಗು ತಾವು ಪಡೆದುಕೊಂಡ ಪ್ರಯೋಜನಗಳ ಬಗ್ಗೆ ಅವರಿಗೆ ತಮ್ಮ ಹೃತ್ಪೂರ್ವಕ ಭಾವನೆಗಳನ್ನು ವ್ಯಕ್ತಪಡಿಸಿದರು. ಪ್ರತಿಯೊಬ್ಬ ಅಭ್ಯಾಸಿಯೂ ಆನಂದೋತ್ಸಾಹದಲ್ಲಿ ಮುಳುಗಿದ್ದರು.

ಕೊನೆಯಲ್ಲಿ ಸೋ. ಕಮಲೇಶ್‌ರವರಿಗೆ ಪದೇ ಪದೇ ಮಾತನಾಡುವಂತೆ ಒತ್ತಾಯ ಪಡಿಸಿದ್ದರಿಂದ ಅವರು ಒಬ್ಬ ಪ್ರಶಿಕ್ಷಕರೂ ಇಲ್ಲದೆ ಈ ಕೇಂದ್ರವು ಬೆಳವಣಿಗೆಯನ್ನು ಕಂಡಿರುವ ವಿಷಯದ ಬಗ್ಗೆ ತಾವು ಸಂತೋಷಗೊಂಡಿರುವುದಾಗಿ ಹೇಳಿದರು. ಹಾಗು ಪರೀಕ್ಷಾರ್ಥವಾಗಿ ಈ ಕೇಂದ್ರದಲ್ಲಿ ಪ್ರಶಿಕ್ಷಕರಿಲ್ಲದೆಯೇ ಅಭ್ಯಾಸಿಗಳು ಯಾರನ್ನು ಬೇಕಾದರೂ ಪರಿಚಯಿಸುವ ವ್ಯವಸ್ಥೆಯನ್ನು ತಾವು ಬಯಸುವುದಾಗಿ ಹೇಳಿದರು. ಅವರು ಮಾಡಬೇಕಾದುದು ಇಷ್ಟೆ. ಏನೆಂದರೆ ಎಲ್ಲರೂ ಸಾಲಾಗಿ ಅಕ್ಕ ಪಕ್ಕದಲ್ಲಿ ಕುಳಿತುಕೊಂಡು 'ಪ್ಲೀಸ್ ಸ್ಟಾರ್ಟ್' ಹಾಗು 30 ರಿಂದ 40 ನಿಮಿಷದ ನಂತರ 'ದಟ್ ಈಸ್ ಆಲ್' ಹೇಳಬೇಕು. ಆದರೆ ಮುಂಚಿತವಾಗಿ ಗುರುಗಳಿಗೆ ತಿಳಿಸಿರಬೇಕು. ಆಶ್ಚರ್ಯವೆಂಬಂತೆ ಸೋ. ಕಮಲೇಶ್‌ರವರು ತಮ್ಮ ಮೊಬೈಲ್ ಸಂಖ್ಯೆಯನ್ನು ಎಲ್ಲರಿಗೂ ನೀಡಿ ಕರೆ ಮಾಡುವಂತೆ ಅಥವ ಸಂದೇಶ ಮೂಲಕವಾಗಿಯಾದರೂ, ಅಪೇಕ್ಷೆ ಪಡುವ ಒಬ್ಬರಾದರೂ ಸರಿ ಅಥವ 200 ಮಂದಿಯಾದರೂ



ಸರಿ, ತಿಳಿಸುವಂತೆ ಅವರಿಗೆ ಹೇಳಿ ತಾವು ಅಂಥವರಿಗೆ ದೂರಗಾಮಿ ಬೈಠಕ್ ನೀಡುವುದಾಗಿ ತಿಳಿಸಿದರು. ಅವರು, ಪ್ರತಿದಿನ ಅಭ್ಯಾಸಿಗಳಿಂದ ಕಡೇಪಕ್ಷ 15 ಸಂದೇಶಗಳನ್ನು ಅಪೇಕ್ಷಿಸುವುದಾಗಿ ಒಂದು ನಿರ್ದಿಷ್ಟ ಗುರಿಯನ್ನು ಗೊತ್ತುಮಾಡಿದರು. ಈ ವ್ಯವಸ್ಥೆ ಕೇವಲ ತೆಲಂಗಾಣದ ಭೊಂಗೀರ್ ಕೇಂದ್ರಕ್ಕೆ ಮಾತ್ರ ಸೀಮಿತ ಎಂದು ಸ್ಪಷ್ಟೀಕರಣ ನೀಡಿದರು.

ಅಪರಾಹ್ನದ ವೇಳೆಗೆ ಗುರುಗಳು ತುಮಕುಂಟ ಆಶ್ರಮಕ್ಕೆ ಹಿಂತಿರುಗಿದರು. ಸಮಾವೇಶಕ್ಕೆ ಬಂದಿದ್ದ ಪ್ರಶಿಕ್ಷರುಗಳನ್ನು ಕುರಿತು ಮಾತನಾಡಿದರು. ಗುರುಗಳ ಕಾರ್ಯದ ಬಗ್ಗೆ ನಿಷ್ಠೆಯಿಲ್ಲದೆ ಆಧ್ಯಾತ್ಮಿಕ ಆಂದೋಳನ ಅಸಾಧ್ಯ ಎಂದು ತಿಳಿಸಿದರು. ಪ್ರಶಿಕ್ಷರು ಗುರುಗಳ ಉಪಸ್ಥಿತಿಯನ್ನು ಯಾವಾಗಲೂ ಆವಾಹಿಸುವುದು ಬಹಳ ಮುಖ್ಯ, ಏಕೆಂದರೆ ಅವರ ಸಂಪರ್ಕವಿಲ್ಲದ ಯಾವ ಕೆಲಸವೂ ಅವರು ಬಯಸಿದಂತೆ ಸಾಗದು ಎಂದು ತಿಳಿಸಿದರು.

ಆಗಸ್ಟ್ 8 ರಂದು ಸೋ. ಕಮಲೇಶ್‌ರವರು ಪ್ರಶಿಕ್ಷಕರು ವಾಹಕರಾಗಿ ಕೆಲಸ ಮಾಡುವ ಅವಶ್ಯಕತೆಯಬಗ್ಗೆ ಒತ್ತು ನೀಡಿ ಮಾತನಾಡಿದರು ಹಾಗು ಗುರುಗಳ ಸೇವೆಗೆ ಯಾವುದೇ ಪ್ರತಿರೋಧವನ್ನು ತೋರದಿರುವಂತೆ ಹೇಳಿದರು. ಪ್ರಶಿಕ್ಷಕರು ಕೇವಲ ಬೈಠಕ್‌ಗಳನ್ನು ನೀಡುವುದರಲ್ಲಿ ನಿರತರಾಗಿರುವುದಷ್ಟೇ ಅಲ್ಲದೆ ಸದಾಕಾಲ ಕಾರ್ಯಪ್ರವೃತ್ತರಾಗಿ ಇರಬೇಕೆಂದು ಪ್ರತಿಕ್ರಿಯಿಸಿದರು. ಅವರು ಅಭ್ಯಾಸಿಗಳಿಗೆ ಸಂಜೆಯ ವೇಳೆ ಮನೆಮಂದಿಯ ಜೊತೆ ಕಾಲ ಕಳೆಯುವಂತೆಯೂ ಹಾಗು ತಮ್ಮ ನೆರೆಹೊರೆಯ ಹಿರಿಯರೊಡನೆ ಸಂಭಾಷಿಸುವಂತೆಯೂ ಹಾಗು ಅವರಿಂದ ಕಲಿಯುವಂತೆಯೂ ಸಲಹೆ ನೀಡಿದರು. ರಾತ್ರಿಯ ಊಟದ ನಂತರ ಗುರುಗಳು 9.30 ಕ್ಕೆ ಹೊರಬಂದು ಮಕ್ಕಳೊಡನೆ ಬಹುದೂರದವರೆಗೆ ನಡೆದಾಡಿದರು. ನಡಿಗೆಯ ನಂತರ ಅವರು ಮಕ್ಕಳಿಗೆ ವೇದಗಣಿತ ತಂತ್ರ ಆಧಾರಿತ ವಿಧಾನದ ಮೂಲಕ ಸಂಕೀರ್ಣವಾದ ಸಂಖ್ಯಾಮೂಲದ ಪ್ರಶ್ನೆಗಳಿಗೆ ಬಹು ಸರಳ ರೀತಿಯಲ್ಲಿ ಉತ್ತರ ಪಡೆಯುವ ವಿಧಾನವನ್ನು ಕಲಿಸಿಕೊಟ್ಟರು.

ಆಗಸ್ಟ್ 9ರ ಭಾನುವಾರದ ಸತ್ಸಂಗದ ನಂತರ ಗುರುಗಳು ಅಬುಧಿಯಾತ್ –





ನಾನು ಅಲ್ಪ ಎಂಬ ಸ್ಥಿತಿಯ ಬಗ್ಗೆ ಮಾತನಾಡಿದರು. ತುಮಕುಂಟ ಆಶ್ರಮವನ್ನು ಬಿಟ್ಟು ಕಾನ್ಹಾ ಆಶ್ರಮವನ್ನು 11.00 ಗಂಟೆಗೆ ತಲುಪಿದರು. ಅವರು ಬಾಬೂಜಿಯವರ ಭವ್ಯ ಪ್ರತಿಮೆಯ ಮುಂದೆ ಕುಳಿತು ಅಪರಾಹ್ನ 12 ಗಂಟೆಯಿಂದ ಮಧ್ಯಾಹ್ನ 12.45 ರವರೆಗೆ ಬೈಠಕ್ ನೀಡಿದರು. ಅಪರಾಹ್ನದ ವೇಳೆಯಲ್ಲಿನ ಬೈಠಕ್ಕುಗಳು ಗತಿಯನ್ನು ಹೆಚ್ಚಿಸುವುದರಿಂದ ಕೊಡುವವನು ಕೊಡುವುದನ್ನು ಪಡೆದುಕೊಳ್ಳುವವನಿಗೆ ಸುಲಭವಾಗಿ ತೆಗೆದುಕೊಳ್ಳಲು ಸಾಧ್ಯ ಎಂದು ಅವರು ಹೇಳಿದರು. ಹೃತ್ಪೂರ್ವಕತೆಯಂತಹ ಕಾರ್ಯಕ್ರಮಗಳು ಸಹ ಇಂತಹ ಸಮಯದಲ್ಲಿ ಮಾಡುವುದರಿಂದ ಇದನ್ನು ಸೊಗಸಾಗಿ ತೆಗೆದುಕೊಳ್ಳಲು ಸಾಧ್ಯ ಎಂದು ಸಹ ತಿಳಿಸಿದರು. ಅವರು ವಿಶ್ರಾಂತಿಪಡೆಯುವ ತಂತ್ರವನ್ನು ಮಕ್ಕಳಿಗೆ ಕಲಿಸಿಕೊಡಬೇಕೆಂದೂ ಹಾಗು ಅವರು ಇತರರಿಗೂ ಅಂದರೆ ಸ್ನೇಹಿತರು, ಸಂಬಂಧಿಗಳು ಮತ್ತು ತಂದೆ ತಾಯಿಗಳಿಗೆ ಕಲಿಸಿಕೊಡಲು ಸಾಧ್ಯವಾಗಲಿ ಎಂದು ಒತ್ತಾಯಪೂರ್ವಕವಾಗಿ ಹೇಳಿದರು.

ಆಗಸ್ಟ್ 12 ರಂದು ಸಂಜೆ 4 ಗಂಟೆಗೆ ತಮ್ಮ ಪ್ರವಾಸದ ಕೊನೆಯ ಹಂತವಾಗಿ ಹೈದರಾಬಾದಿಗೆ ಹೊರಟರು.

## ಪ್ರಶಿಕ್ಷಕರ ಸಭೆ, ಹೈದರಾಬಾದ್

ಮಹಾರಾಷ್ಟ್ರ, ಕೇರಳ, ತಮಿಳುನಾಡು ಮತ್ತು ಹೈದರಾಬಾದಿನಿಂದ ಆಗಮಿಸಿದ್ದ ಸುಮಾರು 350 ಪ್ರಶಿಕ್ಷಕರಿಗೆ ಹಾಗು ಭಾರತದ ಅನೇಕ ಪ್ರಾಂತ್ಯಗಳಿಂದ ಹಾಗು ಸಾಗರೋತ್ತರ ಶಾಖೆಗಳಿಂದ ಆಗಮಿಸಿದ್ದ ತರಬೇತುದಾರರಿಗೆ ಒಂದು ಸಭೆಯನ್ನು ಆಗಸ್ಟ್ 4ರಿಂದ 8ರವರೆಗೆ ಆಯೋಜಿಸಲಾಗಿತ್ತು. ಇದರಲ್ಲಿ ತರಬೇತಿಯಲ್ಲಿದ್ದ 102 ಪ್ರಶಿಕ್ಷಕರು ಸಹ ಭಾಗವಹಿಸಿದ್ದರು. ದಿನಪೂರ್ಣದ ಕಾರ್ಯಕ್ರಮಗಳು ಬೆಳಿಗ್ಗೆ 9 ರಿಂದ ಶುರುವಾಗಿ ಸಂಜೆಯ 5.30 ರವರೆಗೂ ನಡೆದವು. ಸೋ. ಎಲಿ ಜ಼ಬತ್ ಡೆನ್ಲಿ ಮತ್ತು ಅವರ ತಂಡದವರು ಹೃತ್ಪೂರ್ವಕತೆಯ ಪ್ರವರ್ತನದ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಿಕೊಟ್ಟರು. ಹೃತ್ಪೂರ್ವಕತೆಯ ಹಾದಿಯಲ್ಲಿ ಮುಖ್ಯವಾದ ನಮ್ರತೆಯ ಬಗ್ಗೆ ಒತ್ತು ನೀಡುವ ಅಂಗವಾಗಿ ಪೂಜ್ಯ ಚಾರೀಜಿಯವರ 'ನಮ್ರತೆ'ಯ ಬಗೆಗಿನ ಮಾತುಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು. ವಿಶ್ರಾಂತಿ ಹೊಂದುವ ತಂತ್ರ, ಗುಂಪಿನಲ್ಲಿ ವೈಯಕ್ತಿಕ ಬೈಠಕ್ಕುಗಳನ್ನು ನೀಡುವ ಹಾಗು ಶುದ್ಧೀಕರಣವನ್ನು ಹೇಳಿಕೊಟ್ಟು ಮಾಡಿಸುವ ಹಾಗು ಹೃತ್ಪೂರ್ವಕತೆಯ ಅಣಕು ಕಾರ್ಯಾಗಾರಗಳ ಬಗ್ಗೆ ಪ್ರಾಯೋಗಿಕವಾಗಿ ನಡೆಸಿ ತೋರಿಸಿಕೊಡಲಾಯಿತು.

ಸೋ. ಕಮಲೇಶ್ ರವರು ತುಮಕುಂಟ ಆಶ್ರಮವನ್ನು ಆಗಸ್ಟ್ 6ರ ಬೆಳಿಗ್ಗೆ ತಲುಪಿದರು. ಅವರು ಪ್ರಶಿಕ್ಷಕರಿಗೆ ಬೆಳಗಿನ ಹಾಗು ಸಂಜೆಯ ಸತ್ಸಂಗಗಳನ್ನು ನಡೆಸಿಕೊಟ್ಟರು ಮತ್ತು ಅವರನ್ನು ಕುರಿತು ಮಾತನಾಡಿದರು. ಆಗಸ್ಟ್ 7ರಂದೂ ಸಹ ಅವರು ಸತ್ಸಂಗಗಳನ್ನು ನಡೆಸಿಕೊಟ್ಟರು ಮತ್ತು ನಂತರ ಕಿರು ಭಾಷಣವನ್ನು ಮಾಡಿ ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಪ್ರಶಿಕ್ಷಕರೊಡನೆ ಅವರು ಆಡಿದ ಆಯ್ದ ಮಾತುಗಳು ಹೀಗಿವೆ:

- ಅನಂತವನ್ನು ಹಾಗು ಶಾಶ್ವತ ಸತ್ಯವನ್ನು ಕಂಡು ಇನ್ನೂ ಮುಂದೆ ಸಾಗುತ್ತಿರಬಹುದಾದ ಧಾರ್ಮಿಕ ಪದ್ಧತಿಗಳನ್ನು ಅನುಸರಿಸುತ್ತಿರುವ ಜನರಿಂದ ನಾವು ಅಣಕಕ್ಕೆ ಒಳಗಾಗದಿರಲು ಅಂತಹವರನ್ನು ಆಧ್ಯಾತ್ಮ ಸಾಧಕರಾದ ನಾವು ಅಣಕಿಸಬಾರದು.

- ಆಧ್ಯಾತ್ಮಿಕತೆಯು ಧಾರ್ಮಿಕ ಪದ್ಧತಿಯ ಸತ್ತ್ವವಾಗಿದೆ.

- ತಪ್ಪಿತಸ್ಥ ಮನೋಭಾವವುಳ್ಳ ಹೃದಯ ದೈವೀ ಕೃಪೆಯನ್ನು ಆಕರ್ಷಿಸಲಾರದು. ಅಭ್ಯಾಸಿಗಳು ಇದರಿಂದ ಪಾರಾಗುವತ್ತ ಸಹಾಯ ಮಾಡಲು ಪ್ರಶಿಕ್ಷಕರಾಗಿ ನಾವು ಮೊದಲು ಇದನ್ನು ಅಭ್ಯಾಸ ಮಾಡಬೇಕು.

- ಮೂಲದಿಂದ ಬಂದ ದೈವೀ ಕೃಪೆಯು ಹಿಂತಿರುಗಿ ಹೋಗುವುದಿಲ್ಲ. ನೀವು ಅದನ್ನು ಪಡೆದುಕೊಳ್ಳಲು ತಯಾರಾಗುವವರೆಗೂ ಅದು ಕಾಯುವುದು.

- ಶುದ್ಧೀಕರಣವನ್ನು ಮಾಡುತ್ತಾ ನಾವು ನಮ್ಮ ಎಲ್ಲಾ ಅಶುದ್ಧತೆಯೂ ಹೊರ ಹೋಗುತ್ತಿದ್ದು (ಬದಲಾಗಿ) ನಮ್ಮೊಳಗೆ ಪಾವಿತ್ರ್ಯತೆಯು ಒಳಗೆ ಬರುತ್ತಿರುವುದಾಗಿ ಹೇಳಿಕೊಳ್ಳುತ್ತಿರಲು ನಾವು ಆ ಪಾವಿತ್ರ್ಯತೆಯು ಒಳಬರುವುದನ್ನು ಅನುಭವಿಸುತ್ತಿರಬೇಕು.

- ಶುದ್ಧೀಕರಣವೆಂಬುದು ಮರುಹೊಂದಿಕೆಯಂತೆ. ಇದು ನಿಮ್ಮನ್ನು ಮೂಲ ಸ್ಥಿತಿಗೆ ಕೊಂಡೊಯ್ಯುವುದು. ಪ್ರಾರ್ಥನೆಯೆಂಬುದು ಅದಕ್ಕೆ ಶ್ರುತಿ ನೀಡುವ ಧ್ವನಿಯಿದ್ದಂತೆ.

ಆಗಸ್ಟ್ 8ರಂದು ಸಂಜೆ 6.30ಕ್ಕೆ ತಯಾರಿ ಹಂತದಲ್ಲಿನ 102 ಪ್ರಶಿಕ್ಷಕರಿಗೆ ಕೊನೆಯ ಬೈಠಕ್ಕನ್ನು ಗುರುಗಳು ತಮ್ಮ ಕುಟೀರದಲ್ಲಿ ನೀಡಿದ ನಂತರ ಅವರಿಗೆ ಅರ್ಹತಾ ಪತ್ರವನ್ನು ಹಸ್ತಾಂತರ ಮಾಡಲಾಯಿತು. ಗುರುಗಳು ಅವರೊಡನೆ ಸ್ವಲ್ಪ ಹೊತ್ತು ಮಾತನಾಡುತ್ತ, ಧೈರ್ಯಗುಂದದೆ ಹಾಗು ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಅವರು ಕೆಲಸ ಮಾಡುವಂತೆ ಹೇಳಿದರು. ಮುಖ್ಯ ಧ್ಯಾನ ಮಂದಿರದಲ್ಲಿ 9.00 ಗಂಟೆಗೆ ಸತ್ಸಂಗವನ್ನು ನಡೆಸಿದರು ಹಾಗು ಇದರೊಂದಿಗೆ ವಿಚಾರ ಸಂಕಿರಣವು ಮುಕ್ತಾಯಗೊಂಡಿತು.

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ





## ಹೃತ್ಪೂರ್ವಕತೆಯ ಸಭೆಗಳು

### ರಾಜಸ್ಥಾನ್

ಜುಲೈ 12ರ ಭಾನುವಾರದಂದು, **ಅಜ್ಮೇರ**ದ ರೈಲ್ವೇ ಅಧಿಕಾರಿಗಳ ಸಂಘದಲ್ಲಿ ಧ್ಯಾನ ಕಮ್ಮಟವೊಂದನ್ನು ಏರ್ಪಡಿಸಲಾಗಿತ್ತು. ಉತ್ತರ–ಪಶ್ಚಿಮ ರೈಲ್ವೆಯ ಸುಮಾರು 250 ಅಧಿಕಾರಿಗಳು ಹಾಗು ನೌಕರರು ಇದರಲ್ಲಿ ಭಾಗವಹಿಸಿದ್ದರು. **ಆಲ್ವಾರ್** ಕೇಂದ್ರದಲ್ಲಿ ಜೂನ್ 21 ರಂದು ನಡೆದ ಸಭೆಯಲ್ಲಿ 18 ಜನ ಆಕಾಂಕ್ಷಿಗಳು, ಮಿಷನ್ನನ್ನು ಸೇರಿಕೊಂಡರು.

### ಹರಿಯಾಣ

ಸಂಯುಕ್ತ ರಾಷ್ಟ್ರಗಳ ಅಂತರರಾಷ್ಟ್ರೀಯ ಯೋಗದಿನದ ಸಂದರ್ಭದಂದು, ಜೂನ್ 21 ರಂದು ಹಿಸಾರ್‌ನ ಅಗ್ರೋಹದಲ್ಲಿರುವ ಮಹಾರಾಜ ಅಗ್ರಸೇನ ವೈದ್ಯಕೀಯ ಕಾಲೇಜಿನಲ್ಲಿ "ಧ್ಯಾನ ಮಾಡಲು ಕಲಿಯಿರಿ" ಕಾರ್ಯಕ್ರಮವನ್ನು ನಡೆಸಲಾಯಿತು. ಸುಮಾರು 140 ಜನರ ಆ ಸಭೆಯಲ್ಲಿ ಕಾಲೇಜಿನ ಆಡಳಿತವರ್ಗ, ಉನ್ನತ ಪ್ರಾಧ್ಯಾಪಕ ವರ್ಗ, ವೈದ್ಯರು, ಸಿಬ್ಬಂದಿ ನರ್ಸಗಳು ಹಾಗು ವಿದ್ಯಾರ್ಥಿಗಳನ್ನು ಪಾಲ್ಗೊಂಡಿದ್ದರು. ಕಾಲೇಜಿನ ಸಮನ್ವಯಾಧಿಕಾರಿಗಳು (ಡೀನ್) ಸೇರಿದಂತೆ, ಪ್ರಾಧ್ಯಾಪಕರು ಹಾಗು ವಿದ್ಯಾರ್ಥಿಗಳು ಕೂಡಿ 25 ಜನರಿಗೆ ಅದೇ ದಿನ ಪ್ರಾರಂಭಿಕ ಬೈಠಕ್ಕನ್ನು ಕೊಟ್ಟು, ಧ್ಯಾನವನ್ನು ಪ್ರಾರಂಭಮಾಡಿಸಲಾಯಿತು.

### ಕಲುಬುರ್ಗಿ, ಕರ್ನಾಟಕ

ಕಲುಬುರ್ಗಿಯ ಪೋಲೀಸ್ ತರಬೇತಿ ಕಾಲೇಜಿನಲ್ಲಿ, ಜುಲೈ ತಿಂಗಳ 13 ಹಾಗು 14ರಂದು, 157 ಜನ ಶಿಕ್ಷಾರ್ಥಿಗಳಿಗೆ ನಿರ್ದೇಶಿತ ವಿಶ್ರಾಂತಿ ವಿಧಾನ (ಗೈಡೆಡ್ ರಿಲಾಕ್ಸೇಷನ್ ಟೆಕ್ನಿಕ್) ಹಾಗು ಧ್ಯಾನದ ಸಭೆಯನ್ನು ನಡೆಸಲಾಯಿತು. ನಂತರ, ಸ್ಥಳೀಯ ಪ್ರಶಿಕ್ಷಕರು ಮುಂದಿನ ಎಂಟು ದಿನಗಳು ಸಭೆಗಳನ್ನು ಮುಂದುವರೆಸಿದರು. 13 ನೇ ತಾರೀಖು ಮಧ್ಯಾಹ್ನ, ಗುರುಕುಲ ಕಾಲೇಜಿನಲ್ಲಿ, 150 ಪದವಿ ವಿದ್ಯಾರ್ಥಿಗಳಿಗೆ, ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. 14 ರಂದು ಮಧ್ಯಾಹ್ನ, ಪಿ ಡಿ ಎ ತಾಂತ್ರಿಕ ಕಾಲೇಜಿನ ಸಿಬ್ಬಂದಿ ವರ್ಗಕ್ಕೆ ಮತ್ತೊಂದು ಸಭೆಯನ್ನು ನಡೆಸಲಾಯಿತು.

### ಮಧ್ಯಪ್ರದೇಶ

ಜುಲೈ 11 ಹಾಗು 12ರಂದು, ಶೌಪುರ್, ರಾನ್ನೋಡ್ ಹಾಗು ಶಿವಪುರಿಯಲ್ಲಿ ನಡೆದ ಹೃತ್ಪೂರ್ವಕತೆಯ ಸಭೆಗಳಿಂದ ಈ ಪ್ರದೇಶದ 190 ಆಧ್ಯಾತ್ಮಿಕ ಉತ್ಕಾಂಕ್ಷಿಗಳು ಪ್ರಯೋಜನವನ್ನು ಪಡೆದುಕೊಂಡರು.

### ದಿಂಡಿಗಲ್, ತಮಿಳುನಾಡು

ದಿಂಡಿಗಲ್ಲಿನ ಸಮೀಪದ ನೀಲಾಕೊಟ್ಟಯ್‌ನಲ್ಲಿರುವ ಮಹಿಳೆಯರ ಸರ್ಕಾರಿ ಕಲಾ ಕಾಲೇಜಿನಲ್ಲಿ, ಜೂನ್ 26 ರಂದು ಕಾರ್ಯಕ್ರಮವೊಂದನ್ನು ನಡೆಸಲಾಯಿತು. ಅಂದು, ಅಲ್ಲಿ ಹಾಜರಿದ್ದ 1500 ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ, ಈ ಕಾರ್ಯಕ್ರಮದ ಮುಖಾಂತರ ಅವರಿಗೆ ಧ್ಯಾನ ಪದ್ಧತಿಯನ್ನು ಪರಿಚಯಿಸಲಾಯಿತು. ಕಾಲೇಜಿನ ಆವರಣದಲ್ಲಿ ವ್ಯವಸ್ಥಿತವಾಗಿ ಸತ್ಸಂಗವನ್ನು ನಡೆಸಲು, ಸ್ಥಳ ಹಾಗು ಸಮಯವನ್ನು ಒದಗಿಸಿಕೊಡಲು, ಕಾಲೇಜಿನ ಪ್ರಾಂಶುಪಾಲರು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು.

### ಮಧ್ಯ ಮಹಾರಾಷ್ಟ್ರ

ಅಂತರರಾಷ್ಟ್ರೀಯ ಯೋಗದಿನದ ಸಂದರ್ಭದಲ್ಲಿ, ಮಧ್ಯ ಮಹಾರಾಷ್ಟ್ರದ ಹಲವಾರು ಸ್ಥಳಗಳಲ್ಲಿ ಸಭೆಗಳನ್ನು ನಡೆಸಲಾಯಿತು. ಔರಂಗಾಬಾದಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ಸಿಬ್ಬಂದಿವರ್ಗ, ಅಧ್ಯಾಪಕವರ್ಗ ಹಾಗು ಅವರ ಕುಟುಂಬದವರು ಸೇರಿದಂತೆ ನೂರು ಜನರು ಭಾಗವಹಿಸಿದರು. ಬುಲ್ಡಾನದ ಪಂಕಜ್ ಲಹಾಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ 70 ಜನರಿಗಾಗಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಚಿಖಲಿ ಆಶ್ರಮದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ 22 ಜನರು ಆಗಮಿಸಿದ್ದರು. ಪೈಠಣ್ ಪಟ್ಟಣದ ಪ್ರತಿಷ್ಠಾನ್ ಕಾಲೇಜಿನಲ್ಲಿ ಪ್ರಾಧ್ಯಾಪಕರು, ಅಧ್ಯಾಪಕರು ಹಾಗು ಸಹಾಯಕ ಕರ್ಮಚಾರಿಗಳು ಸೇರಿದಂತೆ, 100 ಆಕಾಂಕ್ಷಿಗಳಿಗಾಗಿ ಸಭೆಯನ್ನು ನಡೆಸಲಾಯಿತು. ನಾಸಿಕ್ ಕೇಂದ್ರವು, ಶಾಲೆಗಳು, ಕಾಲೇಜುಗಳು, ನ್ಯಾಯಾಲಯದ ವಕೀಲರ ಸಂಘ (ಬಾರ್ ಕೌನ್ಸಿಲ್), ಆಸ್ಪತ್ರೆಗಳು, ರೈಲ್ವೆ ಕರ್ಷಣ ಕಾರ್ಯಾಗಾರ (ಟ್ರಾಕ್ಷನ್ ವರ್ಕಶಾಪ್) ಹಾಗು ಗೋಟಿ ಪೋಲೀಸ್ ಠಾಣೆ, ಹೀಗೆ ವಿವಿಧ ವೇದಿಕೆಗಳಲ್ಲಿ ಹಲವಾರು ಚಟುವಟಿಕೆಗಳನ್ನು ಪ್ರಾರಂಭಿಸಿತು. ಅವರಿಗೆ ಆಶ್ಚರ್ಯಕರವಾದ ಪ್ರತಿಕ್ರಿಯೆಗಳು ಬಂದು, 1100 ಕ್ಕೂ ಹೆಚ್ಚಿನ ಆಕಾಂಕ್ಷಿಗಳನ್ನು ತಲುಪಲು ಸಾಧ್ಯವಾಯಿತು.

### ಮುಂಬೈ

ಅಂತರರಾಷ್ಟ್ರೀಯ ಯೋಗದಿನಾಚರಣೆಯ ಸಂದರ್ಭದಲ್ಲಿ ಜೂನ್ 20 ಹಾಗು 21ರಂದು, ಮುಂಬೈ ನಗರದ ಉದ್ದಗಲಕ್ಕೂ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ನಡೆದ ಐದು ಸಭೆಗಳ ಉಪಯೋಗವನ್ನು ಸುಮಾರು 1450 ಕ್ಕಿಂತಲೂ ಹೆಚ್ಚಿನ ಜನರು ಪಡೆದುಕೊಂಡರು. ಪನ್ವೇಲ್ ಆಶ್ರಮ, ವಾಶಿಯಲ್ಲಿಯ ಸಿಡ್‌ಕೊ ಪ್ರದರ್ಶನ ಸಭಾಂಗಣ, ಕಾಂದಿವಿಲಿಯಲ್ಲಿರುವ ಪಯನಿಯರ್ ಪ್ರೌಢಶಾಲೆ, ವಾಶಿಯಲ್ಲಿರುವ ಕರಮ್‌ವೀರ್ ಭಾವ್‌ರಾವ್ ಪಾಟೀಲ್ ಕಾಲೇಜಿನ ಅಧ್ಯಾಪಕ ವರ್ಗ ಹಾಗು ನವಿಮುಂಬೈನ ರಿಲಯನ್ಸ್ ಗುಂಪಿನ ಆಡಳಿತ ಕಛೇರಿಯಲ್ಲಿ ನಡೆದ ಕೇಂದ್ರೀಕೃತ ಕಾರ್ಯಕ್ರಮಗಳ ಮೂಲಕ, ಜನಸಾಮಾನ್ಯರಿಗೆ ಅವಕಾಶ ಮಾಡಿಕೊಡಲಾಯಿತು.

### ಉತ್ತರ ಪ್ರದೇಶ

ಘಾಜಿಯಾಬಾದ್‌ನ ಯುವ ಅಭ್ಯಾಸಿಗಳು ಸಮರ್ಪಿತ ಸ್ವಯಂ ಸೇವಕರ ತಂಡವೊಂದನ್ನು ಮಾಡಿಕೊಂಡು, ಜುಲೈ ಹಾಗು ಆಗಸ್ಟ್ ತಿಂಗಳುಗಳಲ್ಲಿ ಆಯೋಜಿಸಿದ್ದ ಏಳು ಕಾರ್ಯಕ್ರಮಗಳಲ್ಲಿ, 120 ಕ್ಕೂ ಹೆಚ್ಚಿನ ಜನರು ಭಾಗವಹಿಸಿದ್ದರು. ಅಂತರರಾಷ್ಟ್ರೀಯ ಯೋಗ ದಿನದಂದು, ಅಲಹಾಬಾದಿನ ಪ್ರೀತಂನಗರದ ವಾಸಿಗಳಿಗೆ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಸುಮಾರು 150 ಆಕಾಂಕ್ಷಿಗಳು ಇದರಲ್ಲಿ ಭಾಗವಹಿಸಿದ್ದರು. ಉತ್ತರ ಪ್ರದೇಶದ ಕೌಶಾಂಬಿ ಜಿಲ್ಲೆಯ ಧಾತಾ ಹಾಗು ಉಧಿನ್ ಬುಜುರ್ಗ ಹಳ್ಳಿಗಳಲ್ಲಿ ವಿಲೇಜ್ ಕನೆಕ್ಟ್ (ವಿ–ಕನೆಕ್ಟ್) ಕಾರ್ಯಕ್ರಮದ ಭಾಗವಾಗಿ ಆಗಸ್ಟ್ 15 ರಂದು ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ಬಂದಿದ್ದ ಸ್ಥಳೀಯ ಶಾಲೆಯೊಂದರಲ್ಲಿ ಓದುತ್ತಿರುವ ಮಕ್ಕಳು ಸಹ ಈ ಸಭೆಯಲ್ಲಿ ಭಾಗವಹಿಸಿದ್ದರು. ಅಲ್ಲಿದ್ದಂತಹ ಸುಮಾರು 20 ಜನ ಗ್ರಾಮಸ್ಥರು, ಸಭೆಯಲ್ಲಿ ಭಾಗವಹಿಸಿದ್ದರು. ಆಗ್ರಾ ಪಟ್ಟಣದ ಸೂರ್ಯನಗರದ ಅಭ್ಯಾಸಿಯೊಬ್ಬರ ಮನೆಯಲ್ಲಿ ಜುಲೈ 31 ರಂದು ನಡೆದ ಕಾರ್ಯಕ್ರಮದಲ್ಲಿ, ಅಭ್ಯಾಸಿಗಳು ಹಾಗು ಆಕಾಂಕ್ಷಿಗಳನ್ನು ಸೇರಿಸಿ 47 ಜನರು ಭಾಗವಹಿಸಿದ್ದರು.

## ತೆಲಂಗಾಣ

ಆಗಸ್ಟ್ 1 ಹಾಗು 2 ನೇ ತಾರೀಖು, ಕೊಥಾಗುಡಮ್ ಕೇಂದ್ರದ ಸುತ್ತಮುತ್ತಲಿನ ವಿವಿದ ಕಾಲೇಜುಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಭಾಗವಹಿಸಿದವರಲ್ಲಿ ಸುಮಾರು 440 ಜನರು ಧ್ಯಾನವನ್ನು ಮುಂದುವರೆಸುವ ಇಚ್ಛೆಯನ್ನು ವ್ಯಕ್ತಪಡಿಸಿದರು ಹಾಗು ಅವರಲ್ಲಿ 269 ಜನರು ಪ್ರಾರಂಭಿಕ ಬೈಠಕ್ಕನ್ನು ತೆಗೆದುಕೊಂಡರು. ಸಾತುಪಲ್ಲಿ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ, 60 ಜನ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಮನುಗುರುವಿನಲ್ಲಿರುವ ಹೆವಿ ವಾಟರ್ ಪ್ಲಾಂಟಿನಲ್ಲಿ ಕೆಲಸ ಮಾಡುತ್ತಿರುವ ಕೇಂದ್ರೀಯ ಕೈಗಾರಿಕಾ ಸುರಕ್ಷಾ ದಳದ ಎಪ್ಪತ್ತು ಜನ ಕರ್ಮಚಾರಿಗಳು, ಅಸ್ವಪುರಮ್ ಆಶ್ರಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಪಂಜಾಬ್

ಪಟಿಯಾಲಾನಲ್ಲಿರುವ ಕೇಂದ್ರೀಯ ಆಹಾರ ನಿಗಮದ 50 ಜನ ಸಿಬ್ಬಂದಿ ವರ್ಗದವರಿಗೆ, ಜುಲೈ 7 ರಂದು ಒಂದು ಸಭೆಯನ್ನು ನಡೆಸಲಾಯಿತು. ಧ್ಯಾನದ ಬಗ್ಗೆ ಒಂದು ಸಂಕ್ಷಿಪ್ತ ಪರಿಚಯವನ್ನು ನೀಡಿ, ನಂತರ ಸತ್ಸಂಗವನ್ನು ನಡೆಸಲಾಯಿತು. ಆಕಾಂಕ್ಷಿಗಳು ಧ್ಯಾನದ ಬಗ್ಗೆ ಮತ್ತಷ್ಟು ತಿಳಿದುಕೊಳ್ಳುವ ಆಸಕ್ತಿಯನ್ನು ವ್ಯಕ್ತಪಡಿಸಿದರು.



## ಬೆಂಗಳೂರು

ಜುಲೈ ತಿಂಗಳಿನಿಂದೀಚೆಗೆ, ಬೆಂಗಳೂರಿನಲ್ಲಿ 23ಕ್ಕೂ ಹೆಚ್ಚು ಮುಕ್ತ ಸಭೆಗಳನ್ನು ನಡೆಸಲಾಯಿತು ಹಾಗು 150 ಕ್ಕೂ ಹೆಚ್ಚಿನ ಜನರು ಇದರಲ್ಲಿ ಭಾಗವಹಿಸಿ ಪ್ರಯೋಜನವನ್ನು ಪಡೆದುಕೊಂಡರು. ಡಿ ಆರ್ ಡಿ ಒ, ಹೆಚ್ ಎಮ್ ಟಿ, ಸ್ಯಾಮ್ಸಂಗ್, ಸೇರಿದಂತೆ ಐದು ವಾಣಿಜ್ಯ ಕಛೇರಿಗಳಲ್ಲಿ ಹಾಗು ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಭೆಗಳನ್ನು ನಡೆಸಲಾಯಿತು. ಪ್ಯಾರಾಶೂಟ್ ರೆಜಿಮೆಂಟಿನ ತರಬೇತಿ ಕೇಂದ್ರದಲ್ಲಿ, 350 ಜನ ಸೇನೆಯ ಯೋಧರಿಗೆ ಒಂದು ಸಭೆಯನ್ನು ನಡೆಸಲಾಯಿತು ಹಾಗು ಅವರೆಲ್ಲರೂ ಧ್ಯಾನವನ್ನು ಕಲಿಯುವುದರಲ್ಲಿ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದರು. ಆಗಸ್ಟ್ 15 ರಂದು, ಬಹಳಷ್ಟು ಉಪಕೇಂದ್ರಗಳಲ್ಲಿ ಸಭೆಗಳನ್ನು ನಡೆಸಲಾಯಿತು. ಆ ದಿನ, ಸುಮಾರು ನೂರು ಜನ ಆಕಾಂಕ್ಷಿಗಳಿಗೆ ಧ್ಯಾನದ ಪರಿಚಯವನ್ನು ಮಾಡಿಕೊಡಲಾಯಿತು.

**"ಕಾಲೇಜಿನಲ್ಲಿ 36 ಆಕಾಂಕ್ಷಿಗಳಿಗೆ ಸಹಜಮಾರ್ಗ ಪದ್ಧತಿಯನ್ನು ಪರಿಚಯಿಸಿ, ಅಲ್ಲಿ ಹೊಸ ಕೇಂದ್ರವನ್ನು ಪ್ರಾರಂಭಿಸಲು ನೆರವಾದ ಅಭ್ಯಾಸಿ. ನಮ್ಮೆಲ್ಲರಿಂದಲೂ ಸಾಧ್ಯ."**

ಬೆಂಗಳೂರಿಗೆ ಇತ್ತೀಚೆಗೆ ಭೇಟಿ ನೀಡಿದ ಕಮಲೇಶ್ ಭಾಯಿಯವರು ಜೋನಲ್ ಆಶ್ರಮದಲ್ಲಿ ನೀಡಿದ ಭಾಷಣದಲ್ಲಿ, ಸಹಜಮಾರ್ಗ ಆಂದೋಲನದಲ್ಲಿ ಪ್ರತಿಯೊಬ್ಬ ಅಭ್ಯಾಸಿಯೂ ಪಾಲ್ಗೊಂಡು, ನಮ್ಮ ಗುರುಸಮೂಹದ ಸಂದೇಶವನ್ನು ಹೃತ್ಪೂರ್ವಕತೆಯ ಮುಖಾಂತರ ಜನತೆಗೆ ತಲುಪಿಸಲು ಹುರಿದುಂಬಿಸಿದರು. ಇದರಿಂದ ಪ್ರೇರಿತನಾದ ಯುವ ಪಶುವೈದ್ಯ ಹಾಗು ಪ್ರಬಂಧ ಕಾರ್ಯಕ್ರಮದ ಸ್ವಯಂಸೇವಕ ಸಹೋದರನು ಬೆಂಗಳೂರಿನ ಹೊರವಲಯದ ಕಾಲೇಜನ್ನು ಸಂಪರ್ಕಿಸಿದನು. ಪ್ರಬಂಧ ಕಾರ್ಯಕ್ರಮದಲ್ಲಿ ಕಾಲೇಜು ಭಾಗವಹಿಸುವ ಪ್ರಯತ್ನದಲ್ಲಿರುವಂತೆಯೆ, ಆತ ವಿಶ್ರಾಂತಿ ವಿಧಾನದ ಕುರಿತು ಕೆಲವು ವಿದ್ಯಾರ್ಥಿಗಳೊಡನೆ ಚರ್ಚಿಸಿದನು. ಸುಮಾರು 20 ವಿದ್ಯಾರ್ಥಿಗಳು ಆಸಕ್ತಿ ತೋರಿದೊಡನೆ, ಈ ಸಹೋದರನು ಆತ್ಮವಿಶ್ವಾಸದಿಂದ ವಿಧಾನವನ್ನು ಪರಿಚಯಿಸಿದಾಗ, ವಿದ್ಯಾರ್ಥಿಗಳು ಅದು ನೀಡಿದ ಪರಿಣಾಮದಿಂದ ಪ್ರಭಾವಿತರಾದರು. ನಂತರ, ಆತನು ಅವರಿಗೆ ತಮ್ಮ ಅನುಭವವನ್ನು ಗಹನಗೊಳಿಸುವ ಆಸಕ್ತಿಯಿರುವುದಾದರೆ ಧ್ಯಾನ ಮಾಡಬಹುದೆಂದು ಹೇಳಿದೊಡನೆಯೆ ಅವರು ಒಪ್ಪಿಗೆ ನೀಡಿದರು. ಸಹೋದರನು ಕೂಡಲೆ ತನ್ನ ಪ್ರಶಿಕ್ಷಕರಿಗೆ ಕರೆ ಮಾಡಿ ದೂರಗಾಮಿ ಬೈಠಕು ನೀಡಲು ವಿನಂತಿಸಿ, ತಾನು ಅವರೊಡನೆ ಕುಳಿತನು. ಮರುದಿನವೂ ಸಹ ಆತನು ಎರಡನೆಯ ದೂರಗಾಮಿ ಬೈಠಕಿನ ವ್ಯವಸ್ಥೆ ಮಾಡಿದನು. ಮೂರನೆಯ ದಿನದಂದು, ಪ್ರಶಿಕ್ಷಕರು ಖುದ್ದಾಗಿ ಕಾಲೇಜಿಗೆ ತೆರಳಿ, ವಿದ್ಯಾರ್ಥಿಗಳನ್ನು ಭೇಟಿ ಮಾಡಿದರು. ಆಶ್ಚರ್ಯವಶಾತ್, ಪ್ರಾಂಶುಪಾಲರೂ ಸೇರಿದಂತೆ 11 ಶಿಕ್ಷಕರು ಪದ್ಧತಿಯನ್ನು ಪ್ರಾರಂಭಿಸಲು ಆಸಕ್ತರಾಗಿದ್ದರು.

ಈ ಒಂದು ಅಭ್ಯಾಸಿಯ ಕಾರಣದಿಂದ, ಆ ಕಾಲೇಜಿನಲ್ಲಿ ಹೊಸ ಕೇಂದ್ರವು ಪ್ರಾರಂಭವಾಗಿದ್ದು, ಪ್ರತಿ ಶನಿವಾರ ಅಪರಾಹ್ನ 1ರಿಂದ 2ರವರೆಗೆ 36 ಅಭ್ಯಾಸಿಗಳು ಧ್ಯಾನ ಮಾಡುತ್ತಿದ್ದಾರೆ. ಸಹಜಮಾರ್ಗ ಆಂದೋಲನದಲ್ಲಿ ತನ್ನ ಅಳಿಲುಸೇವೆಯನ್ನು ಸಲ್ಲಿಸುವ ಅವಕಾಶ ದೊರೆತಿದ್ದರಿಂದ, ಆ ಅಭ್ಯಾಸಿಯು ಅಪಾರ ಆನಂದದಿಂದಿರುವನು.

# ಪೂಜ್ಯ ಚಾರೀಜಿ ಮಹಾರಾಜರ 88 ನೆಯ ಜನ್ಮದಿನದ ಆಚರಣೆ

ನಮ್ಮೆಲ್ಲರ ಪ್ರೀತಿಯ ಚಾರೀಜಿ ಮಹಾರಾಜರ 88ನೆಯ ಜನ್ಮ ದಿನವನ್ನು ತಮಿಳುನಾಡಿನ ತಿರುವಳ್ಳೂರಿನಲ್ಲಿ ಮೂರು ದಿನದ ಭಂಡಾರವಾಗಿ ಆಚರಿಸಲಾಯಿತು. ಭಂಡಾರದಲ್ಲಿ ಭಾಗವಹಿಸಲು ಸಾಧ್ಯವಾಗದ ಅಭ್ಯಾಸಿಗಳು ತಮ್ಮ ತಮ್ಮ ಕೇಂದ್ರಗಳಲ್ಲಿಯೇ ಆಚರಿಸಿದರು. ಭಾರತದಲ್ಲಿ ಕೆಲವು ಕೇಂದ್ರಗಳಲ್ಲಿ ನಡೆದ ಆಚರಣೆಯ ಛಾಯಾಚಿತ್ರಗಳ ದೃಶ್ಯಾವಳಿಯೊಂದನ್ನು ಈ ಕೆಳಗೆ ಕೊಡಲಾಗಿದೆ.


















## ಹೊಸ ನೇಮಕಾತಿಗಳು

**ಆಶ್ರಮ ನಿರ್ವಾಹಕರು, ಅಲಹಾಬಾದ್ ಕೇಂದ್ರ**
ಕರ್ನಲ್ ಎಸ್ ಕೆ ಶರ್ಮಾ

**ಕೇಂದ್ರ ಉಸ್ತುವಾರಿ, ಅಲಹಾಬಾದ್ ಕೇಂದ್ರ**
ಪ್ರತಿಮಾ ಶ್ರೀವಾಸ್ತವ

**ಕೇಂದ್ರ ಉಸ್ತುವಾರಿ, ಲಕ್ನೋ ಕೇಂದ್ರ**
ಪಿ ಕೆ ಮಿಶ್ರಾ

**ಕೇಂದ್ರ ಉಸ್ತುವಾರಿ, ನಲಗೊಂಡ ಕೇಂದ್ರ**
ಟಿ. ಬಿಕ್ಷಮ್

## ಹೊಸ ಅಭ್ಯಾಸಿಗಳಿಗಾಗಿ ತರಬೇತಿ ಕಾರ್ಯಕ್ರಮ, ಉದಯಪುರ

ಉದಯಪುರ ಕೇಂದ್ರದಲ್ಲಿ, ಹೊಸದಾಗಿ ಸೇರಿದ 25 ಅಭ್ಯಾಸಿಗಳಿಗಾಗಿ ಜುಲೈ 5 ರಂದು ಒಂದು ದಿನದ ತರಬೇತಿ ಕಾರ್ಯಕ್ರಮವೊಂದನ್ನು ನಡೆಸಲಾಯಿತು. ಅಭ್ಯಾಸಿಗಳನ್ನು ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಂಗಡಿಸಿ, ಪ್ರಾರ್ಥನೆ, ಧ್ಯಾನ, ಶುದ್ಧೀಕರಣ, ಗುರುಗಳು ಹಾಗು ಸಂಸ್ಥೆ ಇತ್ಯಾದಿ ವಿಷಯಗಳನ್ನು ಚರ್ಚಿಸಿಲಾಯಿತು. ನಂತರ ಪ್ರಶ್ನೋತ್ತರ ಕಾರ್ಯಕ್ರಮವನ್ನು ಏರ್ಪಡಿಸಿದ್ದುದರಿಂದ ಸಾಧನೆಯ ಕುರಿತು ಅವರಿಗೆ ಇದ್ದ ಸಂದೇಹಗಳನ್ನು ನಿವಾರಿಸಿಕೊಳ್ಳಲು ಸಹಾಯವಾಯಿತು.

ಹೃತ್ಪೂರ್ವಕತೆಯ ಕಾರ್ಯಕ್ರಮಗಳು, ವಿವಿಧ ಪತ್ರಿಕೆಗಳು ಹಾಗು ಇ–ಸಾಹಿತ್ಯಕ್ಕೆ ಚಂದಾದಾರರಾಗುವ ವಿಧಾನ, ಇತ್ಯಾದಿ ಮಿಷನ್ನಿನ ಚಟುವಟಿಕೆಗಳ ಬಗ್ಗೆಯೂ ಅಭ್ಯಾಸಿಗಳಿಗೆ ತಿಳಿಸಿಕೊಡಲಾಯಿತು. ಭಾಗವಹಿಸಿದ್ದವರ ಪ್ರತಿಕ್ರಿಯೆಗಳು ಧನಾತ್ಮಕವಾಗಿಯೂ ಹಾಗು ಪ್ರೋತ್ಸಾಹಕರವಾಗಿಯೂ ಇದ್ದವು. ಕಾರ್ಯಕ್ರಮವನ್ನು ಸಂಜೆಯ ಧ್ಯಾನದೊಂದಿಗೆ ಮುಕ್ತಾಯಗೊಳಿಸಲಾಯಿತು.



## ಬಿಷ್ನುಪುರ, ಪಶ್ಚಿಮ ಬಂಗಾಳ

ಬಿಷ್ನುಪುರ ಕೇಂದ್ರವು, ಖರಗ್‌ಪುರದ ರಿಟ್ರೀಟ್ ಕೇಂದ್ರದಿಂದ, ಸುಮಾರು 70 ಕಿ.ಮಿ ದೂರದಲ್ಲಿದೆ. ಎರಡೂವರೆ ವರ್ಷಗಳ ಹಿಂದೆ ಈ ಕೇಂದ್ರವು, ಸುಮಾರು ಮೂವತ್ತು ಅಭ್ಯಾಸಿಗಳಿಂದ ಪ್ರಾರಂಭವಾಯಿತು ಹಾಗು ಸಂಖ್ಯೆಯು ಹೆಚ್ಚುತ್ತಿರುವುದರಿಂದ ಧ್ಯಾನಕ್ಕಾಗಿ ಜಾಗವೊಂದರ ಅವಶ್ಯಕತೆ ಬಹಳವಾಗಿತ್ತು. ಆವಶ್ಯಕ ಅನುಕೂಲಗಳುಳ್ಳಂತಹ, ಸುಮಾರು 800 ಚದರ ಅಡಿಗಳ ಸಭಾಂಗಣವೊಂದನ್ನು, ಬಾಡಿಗೆಗೆ ತೆಗೆದುಕೊಳ್ಳಲಾಗಿದೆ.

12 ಜುಲೈ ಭಾನುವಾರದಂದು ಸೋದರ ಅಜಯ್ ಭಟ್ಟರ್ (ವಲಯ ಉಸ್ತುವಾರಿ) ಅವರು ಸಭಾಂಗಣವನ್ನು ಉದ್ಘಾಟಿಸಿ ನಡೆಸಿಕೊಟ್ಟಂತಹ ಸತ್ಸಂಗದಲ್ಲಿ, ಕೋಲ್ಕತ್ತಾ ಕೇಂದ್ರದ 35 ಅಭ್ಯಾಸಿಗಳು ಸೇರಿದಂತೆ ಸುಮಾರು 75 ಅಭ್ಯಾಸಿಗಳು ಭಾಗವಹಿಸಿದ್ದರು. ಐವರು ಹೊಸ ಆಕಾಂಕ್ಷಿಗಳನ್ನು ಸಹ ಸೇರಿಸಿಕೊಳ್ಳಲಾಯಿತು. ಅಭ್ಯಾಸಿಗಳು, ಗುರುಗಳ ಬಗ್ಗೆ ಪ್ರೇಮ ಹಾಗು ಕೃತಜ್ಞತೆಯಿಂದ ತುಂಬಿ ಹೋಗಿದ್ದರು. ಕಮಲೇಶ್ ಭಾಯಿಯವರ ಭಾಷಣದ ಧ್ವನಿಸುರುಳಿಯ ನಂತರ, ಖರಗ್‌ಪುರದ ಸೋದರ ಬನ್ಸಿ ಬದನ್ ಬೇರಾ ಹಾಗು ಸೋದರ ಅಜಯ್ ಭಟ್ಟರ್ ಅವರು ಮಾತನಾಡಿದರು. ಅವರು, ಈ ಹೊಸ ಕೇಂದ್ರವು ನೀಡುತ್ತಿರುವ ಅವಕಾಶವನ್ನು ವಿವೇಕದಿಂದ, ಆಧ್ಯಾತ್ಮಿಕ ವಿಕಾಸಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬುದನ್ನು ಒತ್ತಿ ಹೇಳಿದರು.

## ಜೋಧ್‌ಪುರ, ರಾಜಸ್ಥಾನ್

ಆಗಸ್ಟ್ 9 ರಂದು, ಮಕ್ಕಳು ಹಾಗು ಅಭ್ಯಾಸಿ ಸೋದರಿಯರು ಮಾಡಿದಂತಹ ವಿವಿಧ ವಸ್ತುಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು. ರಾಖಿಗಳು, ಕೈಯಲ್ಲಿ ಮಾಡಿದ ಲಕೋಟೆಗಳು, ಒಣಹಣ್ಣುಗಳಿಡುವ ಮರದ ಡಬ್ಬಗಳು, ಕೀ ಚೈನುಗಳಿಡುವ ಮರದ ಡಬ್ಬಗಳು, ಹಾಗು ಕೆಲವು ಕ್ವಿಲಿಂಗ್ (ಕಾಗದದ ಸಪೂರ ಪಟ್ಟಿಗಳು) ಆಭರಣಗಳು ಇತ್ಯಾದಿ ವಸ್ತುಗಳಿದ್ದವು. ಮಕ್ಕಳ ಕೇಂದ್ರದಲ್ಲಿ ಭಾವಪರವಶಗೊಳಿಸುವಂತಹ ಪ್ರತಿಕ್ರಿಯೆಯು ಕಂಡುಬಂದಿತು. ಅವರುಗಳು, ಇನ್ನು ಮುಂದಿನ ಈ ರೀತಿಯ ಪ್ರದರ್ಶನದ ಏರ್ಪಾಡನ್ನು ಕಾತುರದಿಂದ ಎದುರುನೋಡುತ್ತಿದ್ದಾರೆ.





## ವಲಯದ ಸಭೆ, ಹರಿಯಾಣ

ಹರಿಯಾಣದ ಎಲ್ಲಾ ಕೇಂದ್ರಗಳ ವಲಯ ಮಟ್ಟದ ಪ್ರಶಿಕ್ಷಕರ, ಸಂಘಟನಕಾರರ, ಸಹಾಯಕರ, ಸ್ವಯಂಸೇವಕರ, ಹಾಗು ಕೇಂದ್ರಗಳ ಮುಖ್ಯಸ್ಥರ ಸಭೆಯೊಂದನ್ನು, ಸೋನೆಪತ್‌ನ ಆಶ್ರಮದಲ್ಲಿ ಜುಲೈ 12 ರಂದು ಏರ್ಪಡಿಸಲಾಗಿತ್ತು. ಹೃತ್ಪೂರ್ವಕತೆ, ಎಲ್ಲಾ ಕೇಂದ್ರಗಳ ಮುಖ್ಯಸ್ಥರಿಂದ ಕೇಂದ್ರವಾರು ಪ್ರಗತಿಯ ವರದಿಗಳು, ಹೃತ್ಪೂರ್ವಕತೆಯ ಕಾರ್ಯಕ್ರಮಕ್ಕೆ ಅವಶ್ಯಕವಾದದ್ದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯ, ಇವುಗಳು ಸೇರಿದಂತೆ, ಮಿಷನ್ನಿನಲ್ಲಿ ಹೊಸದಾಗಿ ಪ್ರಾರಂಭಿಸಿರುವ ಎಲ್ಲಾ ಕಾರ್ಯಕ್ರಮಗಳು ಈ ಸಭೆಯ ಭಾಗವಾಗಿದ್ದವು.

ಹೊಸ ಕಾರ್ಯಕ್ರಮಗಳಿಗಾಗಿ (ವಲಯ ಹಾಗು ಕೇಂದ್ರಗಳ ಮಟ್ಟದಲ್ಲಿ) ಸಂಘಟನಕಾರರ ನೇಮಕಾತಿ, ದೂರದ ಬೈಠಕ್ಕುಗಳ ಅವಶ್ಯಕತೆ ಹಾಗು ಕೇಂದ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಹ ಚರ್ಚಿಸಲಾಯಿತು. ವಲಯ ಉಸ್ತುವಾರಿಯಾದ ಸೋದರ ಸತ್ಯ ಮಂಡಲ್‌ರವರು, ಹೃತ್ಪೂರ್ವಕತೆಯ ಕಾರ್ಯಕ್ರಮಗಳ ಕೇಂದ್ರವಾರು ಅನುಷ್ಠಾನದ ವಿವರಣೆಯನ್ನು ಪ್ರಸ್ತುತ ಪಡಿಸಿದರು.

## ಬೇವರ್, ರಾಜಸ್ಥಾನ್

ಜೂನ್ 1 ರಂದು, 7 ಬಿ ವಲಯದ ವಲಯ ಉಸ್ತುವಾರಿ ಸೋದರ ಮಧುಕರ್‌ರವರು ಇನ್ನಿಬ್ಬರು ಸೋದರರೊಡಗೂಡಿ, ಸ್ವಯಂಸೇವಕರು ಹಾಗು ಅಭ್ಯಾಸಿಗಳಿಗಾಗಿ, ಸ್ವಯಂ ಸುಧಾರಣೆಯ ಕುರಿತು, ಹೃದಯಂಗಮವಾದ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟರು. ಧ್ಯಾನ, ಹತ್ತು ನಿಯಮಗಳು, ಮೌಲ್ಯಾಧಾರಿತ ಶಿಕ್ಷಣ, ಯು–ಕನೆಕ್ಟ್, ಹೃತ್ಪೂರ್ವಕತೆಯ ಕಾರ್ಯಕ್ರಮಗಳು, ಚಾರಿತ್ರ್ಯ ಸುಧಾರಣೆಯ ಪಾತ್ರ, ಇತ್ಯಾದಿ ಹಲವಾರು ವಿಷಯಗಳನ್ನು ಈ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು.



ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ



## ಯು–ಕನೆಕ್ಟ್ ಕಾರ್ಯಕ್ರಮಗಳು

### ಶಿವಕಾಶಿ, ತಮಿಳುನಾಡು

ಮೆಪ್ಕೊ ಶ್ಲೆಂಕ್ ತಾಂತ್ರಿಕ ಕಾಲೇಜಿನಲ್ಲಿ, ಜುಲೈ 1 ರಂದು, ಯು–ಕನೆಕ್ಟ್ ಕಾರ್ಯಕ್ರಮದಡಿ, ಸ್ವಯಂ ವಿಕಸನ (ಸೆಲ್ಫ ಡೆವೆಲಪ್‌ಮೆಂಟ್) ಕಾರ್ಯಕ್ರಮವೊಂದನ್ನು ಉದ್ಘಾಟಿಸಲಾಯಿತು. ಸುಮಾರು 250 ಜನ ಪದವಿ ವಿದ್ಯಾರ್ಥಿಗಳು ಇದರಿಂದ ಪ್ರಯೋಜನ ಪಡೆಯುವರು. ಪ್ರಶಿಕ್ಷಕರಾದ ಸೋದರ ಡಾ.ಟಿ. ಚೆಂತಿಲ್ ಅವರು ಗುರಿ ಸೂಚಿಸುವ ಭಾಷಣದೊಂದಿಗೆ, ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೂರು ತಿಂಗಳ ಅವಧಿಯಲ್ಲಿ, ಒಟ್ಟು 12 ತರಗತಿಗಳನ್ನು ನಡೆಸಲಾಗುವುದು. 'ಮೌಲ್ಯಗಳನ್ನು, ನಡವಳಿಕೆಗಳನ್ನು ಹಾಗು ಮನೋಧರ್ಮವನ್ನು ಅರ್ಥಮಾಡಿಕೊಳ್ಳುವುದು' 'ದೇವರು, ಆತ್ಮ ಹಾಗು ಯೋಗದ ಅಂತಿಮ ಗುರಿ', 'ಯೋಗದ ವಿವಿಧ ಬಗೆಗಳು ಹಾಗು ಯೋಗದಲ್ಲಿ ಮೌಲ್ಯಗಳ ಏಕೀಕರಣ' ಇತ್ಯಾದಿ ವಿಷಯಗಳನ್ನು ಇದುವರೆಗೆ ಚರ್ಚಿಸಲಾಗಿದೆ. ಎಲ್ಲಾ ತರಗತಿಗಳು ವಿಚಾರ ವಿನಿಮಯವನ್ನೊಳಗೊಂಡಿದ್ದು, ಧ್ಯಾನದೊಡನೆ ಮುಕ್ತಾಯಗೊಂಡವು. ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

### ಸ್ವಯಂಸೇವಕರಿಗಾಗಿ ಕಾರ್ಯಾಗಾರ, ತಿರೂರು, ಕೇರಳ

ಜೂನ್ 19ರಿಂದ 21ರವರೆಗೆ, ತಿರೂರು ಆಶ್ರಮದಲ್ಲಿ ಸ್ವಯಂಸೇವಕರಿಗಾಗಿ ಮೂರು ದಿನದ ಕಾರ್ಯಾಗಾರವೊಂದನ್ನು ಏರ್ಪಡಿಸಲಾಗಿತ್ತು. ವಲಯ 3 ಬಿಯ ಎಲ್ಲಾ ಕೇಂದ್ರಗಳಿಂದ, ಸುಮಾರು 75 ಜನ ಅಭ್ಯಾಸಿಗಳು ಇದರಲ್ಲಿ ಭಾಗವಹಿಸಿದ್ದರು.

ಯು–ಕನೆಕ್ಟ್ ಕಾರ್ಯಕ್ರಮದ ಪರಿಚಯ, ಈ ಕಾರ್ಯಕ್ರಮದ ಬಗ್ಗೆ ಗುರುಗಳಿಗಿರುವ ದರ್ಶನ, ಅದರಲ್ಲಿ ಅಡಕವಾಗಿರುವ ವಿಷಯಗಳು, ಅದನ್ನು ನಿರ್ವಹಿಸುವ ರೀತಿ ಹಾಗು ಯು–ಕನೆಕ್ಟ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ವಿಧಾನ, ಅದರ ಪಠ್ಯಕ್ರಮ ಹಾಗು ಪಾಠದ ಘಟಕಗಳು, ಇವುಗಳ ಕುರಿತು ಈ ಕಾರ್ಯಕ್ರಮದಲ್ಲಿ ತರಗತಿಗಳನ್ನು ಏರ್ಪಡಿಸಲಾಗಿತ್ತು. ಯು–ಕನೆಕ್ಟ್ ಕಾರ್ಯಕ್ರಮದ ವಿವಿಧ ಕಾರ್ಯನಿರ್ವಾಹಕರು ಹಾಗು ಅವರ ಭಾಗದ ಕರ್ತವ್ಯಗಳನ್ನು ವಿವರಿಸಲಾಯಿತು. ಸಹಾಯಕರು, ಇತರ ಕಾರ್ಯಕ್ರಮಗಳಾದ ಸಿ–ಕನೆಕ್ಟ್, ಹೃತ್ಪೂರ್ವಕತೆಯ ಕಾರ್ಯಕ್ರಮಗಳು, ಪ್ರಜ್ಞಾಪೂರ್ವಕ ಜೀವನ, ಧ್ಯಾನ ಹಾಗು ಸ್ವಯಂ ಸುಧಾರಣೆ ಇತ್ಯಾದಿ ವಿಷಯಗಳ ಬಗ್ಗೆಯೂ ವಿವರಿಸಿದರು. ಗುಂಪಿನಲ್ಲಿ ನಡೆದ ಚರ್ಚೆಗಳ ನಂತರ, ಸಂಘ ಸಂಸ್ಥೆಗಳನ್ನು ತಲುಪಲು ಪ್ರತಿಯೊಂದು ಕೇಂದ್ರದಲ್ಲೂ ಸ್ವಯಂಸೇವಕರ ಒಳ್ಳೆಯ ತಂಡವೊಂದನ್ನು ಪ್ರಾರಂಭಿಸಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

## ಜಬಲ್‌ಪುರದ ಯುವ ಅಭ್ಯಾಸಿಗಳ ಸಮ್ಮೇಳನ, ಮಧ್ಯ ಪ್ರದೇಶ

'ವಿಕಾಸ ಹೊಂದುತ್ತಿರುವ ಮಿಷನ್‌ನಲ್ಲಿ ಯುವ ಅಭ್ಯಾಸಿಗಳ ಪಾತ್ರ' ಎಂಬ ವಿಷಯದ ಕುರಿತು, ಜುಲೈ 4 ಹಾಗು 5 ರಂದು, ಜಬಲ್‌ಪುರದ ವಲಯ ಆಶ್ರಮದಲ್ಲಿ ಎರಡು ದಿನಗಳ ಯುವ ಅಭ್ಯಾಸಿಗಳ ಸಮ್ಮೇಳನವೊಂದನ್ನು ಆಯೋಜಿಸಲಾಗಿತ್ತು. ಮಿಷನ್ನಿನಲ್ಲಿ ಆಗುತ್ತಿರುವ ಹೊಸ ಬೆಳವಣಿಗೆಗಳ ಬಗ್ಗೆ ಯುವ ಅಭ್ಯಾಸಿಗಳಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.

ಸುಮಾರು 44 ಜನ ಅಭ್ಯಾಸಿಗಳು ಭಾಗವಹಿಸಿದ್ದ ಈ ಸಭೆಯಲ್ಲಿ, ವಿಚಾರವಿನಿಮಯವು ನಡೆಯಿತು ಹಾಗು ಶಿಸ್ತು, ವಿಧೇಯತೆ, ಧ್ಯಾನ ಹಾಗು ಸಮಯದ ಸದುಪಯೋಗದ ಕುರಿತು ಗುರುಗಳು ನೀಡಿರುವ ಭಾಷಣಗಳನ್ನು ಸಹ ಸೇರಿಸಲಾಗಿತ್ತು.

ಹೃತ್ಪೂರ್ವಕತೆ, ಯು–ಕನೆಕ್ಟ್, ಒಎಸೆಸ್, ಪಿಸುಮಾತುಗಳು, ಮೌಲ್ಯಾಧಾರಿತ ಸ್ವಯಂಸುಧಾರಣೆ ಇತ್ಯಾದಿ ವಿಷಯಗಳ ಕುರಿತು ಸಭೆಗಳು ನಡೆದ ನಂತರ ಸಾಧನೆಯ ಬಗ್ಗೆ ಪ್ರಶ್ನೋತ್ತರಗಳ ಸಭೆಯೊಂದನ್ನು ನಡೆಸಲಾಯಿತು. ಹೃತ್ಪೂರ್ವಕತೆಯ ಬಗ್ಗೆ ಕಮ್ಮಟವೊಂದನ್ನು ನಡೆಸುವುದರ ಮೂಲಕ ಈ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಪ್ರತಿಯೊಂದು ಸಭೆಯ ನಂತರವೂ ಕೇಳಿದ ವಿಷಯಗಳನ್ನು ಮನನ ಮಾಡಿ, ತಮ್ಮ ವಿಚಾರಗಳನ್ನು ದಿನಚರಿಯಲ್ಲಿ ಬರೆಯಲು ಸಾಕಷ್ಟು ಸಮಯವನ್ನು ನೀಡಲಾಯಿತು. ಯುವ ಅಭ್ಯಾಸಿಗಳು ಈ ಕಾರ್ಯಕ್ರಮದಿಂದ ಬಹಳಷ್ಟು ಪ್ರೋತ್ಸಾಹಿತರಾದರು ಹಾಗು ಆಶ್ರಮದಲ್ಲಿ ಅತ್ಯುತ್ಸಾಹದಿಂದ ಸ್ವಯಂಸೇವೆ ಮಾಡಿದರು.





## ಯೋಗಾಶ್ರಮ, ಪಾಲಕ್ಕಾಡ್, ಕೇರಳ

## ಪ್ರಭಾಕೇಂದ್ರ







ಇಸವಿ 1989ನ ನವೆಂಬರ್‌ನಲ್ಲಿ, ಪಾಲಕ್ಕಾಡ್‌ನ ಪುರಭವನದಲ್ಲಿ ನಡೆದ ಮುಕ್ತಸಭೆಯಿಂದ ಮಿಷನ್ನಿನ ಬಗ್ಗೆ ಅರಿವು ಜಾಗೃತಗೊಂಡು, ಕೆಲವರು ಸಾಧನೆಯನ್ನು ಪ್ರಾರಂಭಿಸಿದರು. ಡಿಸೆಂಬರಿನ ಹೊತ್ತಿಗೆ, ಪ್ರಶಿಕ್ಷಕ ಸೋದರ ರವೀಂದ್ರನಾಥನ್‌ರವರ ಮನೆಯಲ್ಲಿ ನಿಯತವಾಗಿ ಭಾನುವಾರದ ಸತ್ಸಂಗಗಳನ್ನು ನಡೆಸಲಾಗುತ್ತಿದ್ದಿತು. ಕ್ರಮೇಣ, ಬುಧವಾರದ ಸತ್ಸಂಗವನ್ನು ಇತರೆ ಅಭ್ಯಾಸಿಗಳ ಮನೆಗಳಲ್ಲಿ ನಡೆಸಲಾರಂಭಿಸಲಾಯಿತು. ಅಂದಿಗೆ, ಸುಮಾರು ಇಪ್ಪತ್ತು ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಳ್ಳುತ್ತಿದ್ದರು.

ವರ್ಷಗಳುರುಳುತ್ತಿದ್ದಂತೆ, ಆಶ್ರಮವನ್ನು ಹೊಂದುವ ಇಚ್ಛೆಯು ಬಲವಾಯಿತು. ಪಾಲಕ್ಕಾಡ್ ಪಟ್ಟಣದಿಂದ 4 ಕಿ. ಮೀ. ದೂರದಲ್ಲಿ, ನೆಮ್ಮಾರದ ದಿಕ್ಕಿನಲ್ಲಿರುವ ಯಾಕ್ಕರ ಎಂಬ ಪ್ರದೇಶದಲ್ಲಿ ಆಶ್ರಮದ ಸಲುವಾಗಿ ಜಮೀನನ್ನು ನೋಡಲಾಯಿತು. 1993ರಲ್ಲಿ ಮಿಷನ್ನಿನ ಹೆಸರಿನಲ್ಲಿ ಅದನ್ನು ನೋಂದಣಿ ಮಾಡಲಾಯಿತು. ಆಶ್ರಮದ ಜಾಗದ ಒಟ್ಟಾರೆ ವಿಸ್ತೀರ್ಣವು 73.7 ಸೆಂಟ್‌ಗಳಷ್ಟಿದ್ದು, 2250 ಚ.ಅಡಿಯಷ್ಟು ಧ್ಯಾನಮಂದಿರ, ಪಾಕಶಾಲೆ, ಭೋಜನಶಾಲೆ ಹಾಗು ಶೌಚಾಲಯದ ವ್ಯವಸ್ಥೆಯನ್ನು ಪಡೆದಿದೆ. ಚಾರೀಜಿ ಮಹಾರಾಜರು ಸೆಪ್ಟೆಂಬರ್ 10, 1995ರಂದು ಶಿಲಾನ್ಯಾಸವನ್ನು ನೆರವೇರಿಸಿದರು. ಮೊದಲಿಗೆ 700 ಚ.ಅಡಿಯ ಸಭಾಂಗಣದ ನಿರ್ಮಾಣವಾಯಿತು. 2005ರವರೆಗೆ ಸತ್ಸಂಗಗಳನ್ನು ಅಲ್ಲಿಯೆ ನಡೆಸಲಾಗುತ್ತಿದ್ದಿತು. 2002ರಲ್ಲಿ ಪ್ರಾರಂಭವಾದ ಧ್ಯಾನಮಂದಿರದ ನಿರ್ಮಾಣಕಾರ್ಯವು 2005ರಲ್ಲಿ ಮುಕ್ತಾಯಗೊಂಡಿತು. ಮಾರ್ಚ್ 9, 2005ರಂದು ಚಾರೀಜಿಯವರು ನವ ಧ್ಯಾನಮಂದಿರವನ್ನು ಉದ್ಘಾಟಿಸಿದರು. ಮೊದಲಿನ ಧ್ಯಾನಮಂದಿರವನ್ನು ಅಡುಗೆ ಹಾಗು ಭೋಜನಕ್ಕಾಗಿ ಬಳಸಲಾಗುತ್ತಿದೆ.

ಆಶ್ರಮದ ಸ್ಥಳದಲ್ಲಿ ಸುಂದರವಾದ ಹುಲ್ಲುಹಾಸನ್ನು ಬೆಳೆಸಲಾಗಿದ್ದು, ಮುಂಭಾಗದಲ್ಲಿ ಪುಟ್ಟ ತಾವರೆಕೊಳವಿದೆ. ದಕ್ಷಿಣಭಾಗದಲ್ಲಿ ಮಾವು, ತೆಂಗಿನಮರಗಳಿವೆ. ಆವರಣದ ತೆರೆದ ಬಾವಿಯಿಂದ ನೀರನ್ನು ಸೇದಿ ತೆಗೆಯಲಾಗುವುದು. ಆಶ್ರಮವು ಯಾಕ್ಕರ ನದಿಯ ತಟದಲ್ಲಿರುವುದರಿಂದ, ವಾತಾವರಣವು ಸದಾ ತಂಪಾದ ಗಾಳಿ ಬೀಸುತ್ತಲಿರುತ್ತದೆ. ಒಮ್ಮೊಮ್ಮೆ ನವಿಲುಗಳು ಆಶ್ರಮಕ್ಕೆ ಭೇಟಿ ನೀಡುತ್ತವೆ.

ಪ್ರಸ್ತುತ, ಪಾಲಕ್ಕಾಡ್ ಕೇಂದ್ರದಲ್ಲಿ 150ಕ್ಕೂ ಅಧಿಕ ಅಭ್ಯಾಸಿಗಳಿದ್ದು, ಭಾನುವಾರ ಮುಂಜಾನೆಯ ಹಾಜರಿ ಸರಾಸರಿ 70 ಇರುವುದು. ಪ್ರತಿ ಸಂಜೆ ಸತ್ಸಂಗವನ್ನು ನಡೆಸಲಾಗುವುದು. ಪತ್ರಿಪಾಲ, ಚೆರ್‌ಪುಲಸರಿ, ನೆಮ್ಮಾರ, ಕೊಂಗಾಡ್ ಮತ್ತು ಕಲ್ಲೆಪಲ್ಲಿಗಳ ಉಪಕೇಂದ್ರಗಳು ಸಹ ಉತ್ತಮ ಪ್ರಗತಿ ಕಾಣುತ್ತಿವೆ.

ಪ್ರತಿ ತಿಂಗಳ ಮೊದಲ ಭಾನುವಾರದಂದು ಪೂರ್ಣ ದಿನದ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಸಹಜಮಾರ್ಗಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಚರ್ಚಿಸುವುದರ ಜೊತೆಗೆ, ವಿಡಿಯೊಗಳನ್ನು ತೋರಿಸಲಾಗುತ್ತದೆ. ಅಭ್ಯಾಸಿಗಳ ಅನುಕೂಲಕ್ಕೆಂದು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಗೃಹಕೂಟಗಳು ಹಾಗು ಮುಕ್ತಸಭೆಗಳನ್ನು ವಿವಿಧ ಪ್ರದೇಶಗಳ ಅಭ್ಯಾಸಿಗಳ ಮನೆಗಳಲ್ಲಿ ನಡೆಸಲಾಗುತ್ತದೆ. ಕೇರಳ ವಲಯ 3ಬಿಯ ಪ್ರಬಂಧ ಕಾರ್ಯಕ್ರಮದ ಬಹುಮಾನ ವಿತರಣೆಯನ್ನು ಇಲ್ಲಿ ವರ್ಷಕ್ಕೊಮ್ಮೆ ನಡೆಸಲಾಗುವುದು. ಕೇಂದ್ರವು ಕ್ರಿಯಾಶೀಲವಾಗಿದ್ದು, ಗುರುಗಳ ಸಂದೇಶವನ್ನು ಅತ್ಯಧಿಕ ಜನರ ನಡುವೆ ಬಿತ್ತರಿಸಲು ಸಿದ್ಧವಾಗಿದೆ.



To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2015 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.